ನಾನು ಬೆಂಬಲಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಕೂಡ ಇದಕ್ಕೆ ಬೆಂಬಲವನ್ನು ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಇದಕ್ಕೆ ಬೆಂಬಲವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಹೇಳಿಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರ ಕಡೆ ನೀವು ತಾಳ ಹಾಕಬೇಡಿ. ಮಾನ್ಯ ಚಂದ್ರೇಗೌಡರ ಜೊತೆಗೆ ಸೇರಿ ತಾಳ ಹಾಕುವುದಕ್ಕೆ ಹೋಗಬೇಡಿ. ನೀವು ಸುಮ್ಮನೆ ಇದಕ್ಕೆ ಬೆಂಬಲವನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇವರ ಪರವೇನಾದರೂ ತಾಳ ಹಾಕುವುದಕ್ಕೆ ಹೋದರೆ ತಂಬೂರಿಯನ್ನು ಹಿಡಿದುಕೊಳ್ಳಬೇಕಾಗುತ್ತದೆ ನಾವು. ಇವರ ಪರ ತಾಳವನ್ನು ಹಾಕಿದರೆ ಕೊನೆಗೆ ಉಳಿಯುವುದೇ ಅದೇ.

ಉಪಾಧ್ಯಕ್ಷರು : ತಾಳ ಹಾಕುವುದಕ್ಕೆ ತಂಬೂರಿ ಇರಲೇಬೇಕು.

(ಗೊಂದಲ)

ಶ್ರೀ ಪಿ. ಬಸವರಾಜ್ : ವಾಟಾಳ್ ನಾಗರಾಜ್‌ರಿಗೆ ತಾಳ ತಂಬೂರಿ ಎರಡೂ ಇದ್ದರೆ ಚೆನ್ನಾಗಿರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಜೊತೆಗೆ ನರ್ತನ ಇದ್ದರೆ ಇನ್ನೂ ಚೆನ್ನಾಗಿರುತ್ತದೆ.

4.45 ಪಿ.ಎಂ

ಮಂತ್ರಿಗಳ ಹೇಳಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ದಿನ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು, ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಯಡಿಯೂರಪ್ಪನವರು, ಮಾನ್ಯ ಬೈರೇಗೌಡರು, ಮಾನ್ಯ ದೇಶಪಾಂಡೆಯವರು, ಮಾನ್ಯ ಏಕಾಂತಯ್ಯನವರು, ಮಾನ್ಯ ಸಿಂಧ್ಯಾರವರು ವಿಧಾನಸಭಾ ಅಧ್ಯಕ್ಷರಿಗೆ ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಒಪ್ಪಿಸುತ್ತಾ, ಈ ಪತ್ರಿಕೆಗಳು ಬೀದಿ ಪಾಲಾಗಿದ್ದವು ಎಂಬ ವಿಷಯವನ್ನು ಪ್ರಸ್ತಾಪಿಸಿರುವ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ;

ಇದರ ಬಗ್ಗೆ ಪದವಿ ಪೂರ್ವ ಶಿಕ್ಷಣ ಕಛೇರಿಗೆ ಭೇಟಿಯನ್ನು ನೀಡಿ ಕೂಲಂಕಷವಾಗಿ ಪರಿಶೀಲನೆಯನ್ನು ನಡೆಸಲಾಯಿತು. ಹಾಗೂ ಈ ಕೆಳಕಂಡ ವಿಷಯವನ್ನು ಸಭೆಯ ಮುಂದಿಡಲು ಬಯಸುತ್ತೇನೆ.

ಮೇಲ್ಕಂಡ ಉತ್ತರ ಪತ್ರಿಕೆಗಳು ನವೆಂಬರ್ ತಿಂಗಳಲ್ಲಿ ನಡೆದ ಸಪ್ಲಿಮೆಂಟರಿ ಪರೀಕ್ಷೆಯ ಇಂಗ್ಲೀಷ್ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ. ನವೆಂಬರ್ ತಿಂಗಳಲ್ಲಿ ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಪರಿಶೀಲನೆಯಿಂದ ಈ ವಿಷಯ ತಿಳಿದು ಬಂದಿದೆ. ಇಂಗ್ಲೀಷ್ ಪ್ರಶ್ನೆಪತ್ರಿಕೆಗಳು ಬಯಲಾದುದರಿಂದ ಡಿಸೆಂಬರ್ 20 ರಂದು ಪುನಃ ಮರು ಪರೀಕ್ಷೆಯನ್ನು ನಡೆಸಲಾಗಿದೆ. ಮರು ಪರೀಕ್ಷೆಯನ್ನು ನಡೆಸಲು ಬೇಕಾಗಿದ್ದ ಅಂಕಪಟ್ಟಿಗಳನ್ನು ಮುದ್ರಿಸಲು ಕಛೇರಿಯ ಗಣಕ ಯಂತ್ರವು ಕೆಟ್ಟು ಹೋಗಿದ್ದುದರಿಂದ ಮತ್ತು ಅತೀ ಶೀಘ್ರದಲ್ಲಿ ಅಷ್ಟು ಅಂಕಪಟ್ಟಿಯನ್ನು ಮುದ್ರಿಸಲು ಕಾಲಾವಕಾಶ ಇಲ್ಲದೆ ಇದ್ದುದರಿಂದ

ಈಗಾಗಲೇ ಉತ್ತರ ಪತ್ರಿಕೆಗಳ ಲಕೋಟೆಗಳಲ್ಲಿ ಪರೀಕ್ಷಾ ಕೇಂದ್ರಗಳಿಂದ ಬಂದಿದ್ದ ಅಂಕಪಟ್ಟಿಗಳನ್ನು ಹೊರಕ್ಕೆ ತೆಗೆದು ಅವುಗಳನ್ನು ಪುನಃ ಕೇಂದ್ರಗಳಿಗೆ ಕಳುಹಿಸಿಕೊಡಲು ನಿರ್ಧರಿಸಲಾಯಿತು. ಇದರಿಂದ ಸಾಕಷ್ಟು ಸಮಯ ಮತ್ತು ಖರ್ಚು ಉಳಿತಾಯವಾಯಿತು. ಆದುದರಿಂದ ಎಲ್ಲಾ ಪರೀಕ್ಷಾ ಕೇಂದ್ರಗಳಿಂದ ಬಂದಿರುವ ಉತ್ತರ ಪತ್ರಿಕೆಗಳ ಗಂಟುಗಳನ್ನು ಪಡೆದು ಅವುಗಳಲ್ಲಿರುವ ಲಕೋಟೆಗಳನ್ನು ತೆಗೆದು ಅವುಗಳಿಂದ ಎಲ್ಲಾ ಅಂಕಪಟ್ಟಿಗಳನ್ನು ಶೇಖರಿಸಲಾಯಿತು. ಈ ಕೆಲಸವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿಯ ಉಸ್ತುವಾರಿಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪರೀಕ್ಷಾ ವಿಭಾಗದ ಸಿಬ್ಬಂದಿ ವರ್ಗದವರು ಮಾಡಿರುತ್ತಾರೆ. ಹೀಗೆ ಮಾಡಿದಾಗ ಎಲ್ಲಾ ಉತ್ತರ ಪತ್ರಿಕೆಗಳ ಲಕೋಟೆಗಳು ಸ್ವಲ್ಪ ಚೆಲ್ಲಾಪಿಲ್ಲಿಯಾಗಿದ್ದವು. ಆದೇ ಮೌಲ್ಯಮಾಪನ ಕೇಂದ್ರಕ್ಕೆ ಮರು ಪರೀಕ್ಷೆಯ ಉತ್ತರ ಪತ್ರಿಕೆಗಳು ಬರಬೇಕಾಗಿದ್ದುದರಿಂದ ಮತ್ತು ಮೌಲ್ಯಮಾಪನ ಕೇಂದ್ರದಲ್ಲಿ ಹೊಸ ಉತ್ತರ ಪತ್ರಿಕೆಗಳನ್ನು ಶೇಖರಿಸುವ ಸಲುವಾಗಿ ಮೊದಲು ನಡೆದ ಪರೀಕ್ಷೆಯ ಉತ್ತರ ಪತ್ರಿಕೆಗಳ ಲಕೋಟೆಗಳನ್ನು ಲಾರಿಗಳ ಮೂಲಕ ಗೋದಾಮಿಗೆ ಸಾಗಿಸಲಾಯಿತು. ಸಾಮಾನ್ಯವಾಗಿ ಮೌಲ್ಯಮಾಪನ ನಂತರ ಉತ್ತರ ಉತ್ತರ ಪತ್ರಿಕೆಗಳನ್ನು ಗೋದಾಮಿಗೆ ಹಾಕಬೇಕಾದರೆ ಅವುಗಳನ್ನು ಕೇಂದ್ರಾವಾರು ಮೂಟೆಗಳಾಗಿ ಹೊಲೆದು, ನೀಲು ಹಾಕಿ ಗೋದಾಮಿಗೆ ಸಾಗಿಸಲಾಗುವುದು. ಆದರೆ ಇವು ಮೌಲ್ಯಮಾಪನಕ್ಕೆ ಬೇಕಾಗಾದ ರದ್ದಿ ಕಾಗದಗಳಾಗಿದ್ದುದರಿಂದ ಮತ್ತು ಅಂಕಪಟ್ಟಿಗಳನ್ನು ತೆಗೆದಾಗ ಲಕೋಟೆಗಳೆಲ್ಲಾ ಒಡೆದುದ್ದರಿಂದ ಅವುಗಳನ್ನು ಗೋದಾಮಿಗೆ ಸಾಗಿಸಲಾಯಿತು. ಹೀಗೆ ಸಾಗಿಸುವಾಗ ಅಚಾತುರ್ಯದಿಂದ ಒಂದು ಉತ್ತರ ಪತ್ರಿಕೆಯ ಲಕೋಟೆಯು ಜಾರಿ ಬಿದ್ದು ಬೀದಿ ಪಾಲಾಗಿರಬಹುದು. ಈ ವಿಷಯವನ್ನು ಸರ್ಕಾರವು ಬಹಳ ಗಂಭೀರವಾಗಿ ಪರಿಗಣಿಸಿ ಈ ರೀತಿ ಉತ್ತರ ಪತ್ರಿಕೆಗಳು ಬೀದಿ ಪಾಲಾಗಿರುವ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಲು ನಿರ್ಧರಿಸಿದೆ.

ಪ್ರಶ್ನೆ ಪತ್ರಿಕೆಗಳ ಬಯಲಾಗುವುದನ್ನು ಸೇರಿದಂತೆ ಯಾವುದೇ ಲೋಪದೋಷಗಳು ಇಲ್ಲದಂತೆ ನಡೆಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

1) ಪ್ರಶ್ನೆಪತ್ರಿಕೆಗಳನ್ನು ಆಯಾ ಕೇಂದ್ರ ಮುಖ್ಯ ಅಧೀಕ್ಷಕರಿಗೆ ಮುಂಚಿತವಾಗಿ ಕೊಡುವುದಕ್ಕೆ ಬದಲಾಗಿ ತಹಸಿಲ್ದಾರ್‌ರು, ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಒಬ್ಬರು ಪ್ರಾಂಶುಪಾಲರು ಈ ಮೂರು ಜನ ಜಂಟಿಯಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪ್ರಶ್ನೆಪತ್ರಿಕೆಗಳ ಲಕೋಟೆಗಳನ್ನು ಪಡೆದು ಆಯಾ ಖಜಾನೆಯಲ್ಲಿ ಇಟ್ಟುಕೊಂಡು, ಇವರೇ ಪರೀಕ್ಷೆಯ ದಿನದಂದು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ವಿತರಿಸುವಂತೆ ಈಗಿನ ಹೊಸ ವ್ಯವಸ್ಥೆ ಮಾಡಲಾಗಿದೆ. ಈ ಹೊಸ ವ್ಯವಸ್ಥೆ ಡಿಸೆಂಬರ್ 20 ರಿಂದ ಜಾರಿಗೆ ಬಂದಿದೆ.

2) ಉತ್ತರ ಪತ್ರಿಕೆಗಳು ಅದಲು ಬದಲಾಗುವುದನ್ನು ತಪ್ಪಿಸಲು ಉತ್ತರ ಪತ್ರಿಕೆಗಳ ಕ್ರಮ ಸಂಖ್ಯೆಗಳನ್ನು ಪರ್‌ಫೂರೇಟೆಡ್ ಮಾಡಲು ಯೋಚಿಸಲಾಗಿದೆ.

3) ಉತ್ತರ ಪತ್ರಿಕೆಗಳು ಉಪಯೋಗಿಸಿದ ಮತ್ತು ಉಳಿದಿರುವ ಉತ್ತರ ಪತ್ರಿಕೆಗಳ ಲೆಕ್ಕವನ್ನು ಇಟ್ಟು ಅದನ್ನು ಚುನಾವಣೆಯಲ್ಲಿ ಮತಪತ್ರಿಗಳ ಲೆಕ್ಕ ಇಡುವ ಹಾಗೆ ನೋಡಿಕೊಳ್ಳಲು ಈಗ ಸೂಚಿಸಲಾಗಿದೆ.

4) ಪರೀಕ್ಷೆಯ ನಂತರ ಯಾವ ನೊಂದಣಿಯ ಸಂಖ್ಯೆಯ ವಿದ್ಯಾರ್ಥಿಗೆ ಯಾವ ಕ್ರಮ ಸಂಖ್ಯೆ ಉತ್ತರಪತ್ರಿಕೆ ನೀಡಲಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಂದ್ರಗಳಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ತರಿಸಿಕೊಳ್ಳಲು ಸೂಚಿಸಲಾಗಿದೆ.

5) ಪರೀಕ್ಷೆಯ ಕ್ರಮದಲ್ಲಿ ಸುಧಾರಣೆಗಳನ್ನು ತರುವುದಕೋಸ್ಕರ ಒಂದು ಸಮಿತಿಯನ್ನು ರಚಿಸಿ ಅದರ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ಅತೀ ಶೀಘ್ರವೇ ತರಲಾಗುವುದು.

ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿರುವ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಇನ್ನು ಮುಂದೆ ಇಂತಹ ಅಚಾತುರ್ಯಗಳು ಪುನರಾವರ್ತನೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಭರವಸೆ ನೀಡುತ್ತಾ ಈ ಸದರಿ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸಿ ಒಂದು ವಾರದೊಳಗೆ ವರದಿಯನ್ನು ಸಲ್ಲಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಆದೇಶ ಕೊಡಲಾಗಿದೆ. ಇವರ ವರದಿ ಬಂದ ತಕ್ಷಣ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ತಮ್ಮ ಅಪ್ಪಣೆ ಪ್ರಕಾರ ಈ ಉತ್ತರಗಳನ್ನು ನಾವು ಪರಾಂಬರಿಸಿದ್ದೇನೆ. ತಮಗೆ ಗೊತ್ತಿರಬಹುದು ; ನಾವು ನವೆಂಬರ್‌ನಲ್ಲಿ ಈ ಆಂಗ್ಲ ಪರೀಕ್ಷೆ, ಪದವಿಪೂರ್ವ ಪರೀಕ್ಷೆ ಆದಾಗ ಪ್ರಶ್ನೆಪತ್ರಿಕೆಗಳು ಬಯಲು ಆಯಿತು ಎಂದು ಹೇಳಿ ವರ್ತಮಾನ ಬಂತು. ಆ ಸದನದಲ್ಲಿಯೂ ಕೂಡ ವಿಚಾರ ಪ್ರಸ್ತಾಪವಾದಾಗ, ಇಂಗ್ಲೀಷ್ ಪರೀಕ್ಷೆಯನ್ನು ನಾವು ರದ್ದು ಮಾಡಿದ್ದೇವೆ. ಆದರೆ ಆ ಪರೀಕ್ಷೆ ನಡೆದಿದ್ದರ ಉತ್ತರ ಪತ್ರಿಕೆ ಇದು. ಇದು ಈಗ ರದ್ದಿ ಪೇಪರ್ ಆಗಿದೆ. ಈಗಿನ ಪ್ರಶ್ನೆಪತ್ರಿಕೆ ಇಲ್ಲಿದೆ, ಮೊನ್ನೆ ಡಿಸೆಂಬರ್ 20ನೇ ತಾರೀಖು ಪರೀಕ್ಷೆ ನಡೆಯಿತು. ಆ ಪ್ರಶ್ನೆ ಪತ್ರಿಕೆ ಇದು. 20ನೇ ತಾರೀಖು ಡಿಸೆಂಬರ್ ಪ್ರಶ್ನೆಪತ್ರಿಕೆ ಎಲ್ಲಿ ಮುಟ್ಟಬೇಕೋ ಅದು ಅಲ್ಲಿಗೆ ಮುಟ್ಟಿದೆ. ಅದನ್ನು ನಾನೇ ಸ್ವತ: ಅಲ್ಲಿಗೆ ಹೋಗಿ ಕುಳಿತುಕೊಂಡು ವೆರಿಫೈ ಮಾಡಿ ಖುದ್ದಾಗಿ ನೋಡಿ ನಮ್ಮ ಮನಸ್ಸಿಗೆ ಒಪ್ಪುವಂತೆ ಪರಿಶೀಲನೆ ಮಾಡಿ ಬಂದಿದ್ದೇನೆ. ಈ ಪ್ರಶ್ನೆಗಳಿಗೂ ಮೊನ್ನೆ ಪ್ರಸಕ್ತ ನಡೆದಂಥ ಪ್ರಶ್ನೆಗಳಿಗೂ ಇಲ್ಲಿ ಏನು 10 ಉತ್ತರ ಪತ್ರಿಕೆಗಳನ್ನು ಕೊಟ್ಟಿದ್ದೀರಿ ಅದಕ್ಕೆ ಯಾವುದೇ ಹೋಲಿಕೆ ಇಲ್ಲ, ಇದಕ್ಕೆ ಸಂಬಂಧಪಟ್ಟಂಥ ಉತ್ತರಗಳೂ ಅಲ್ಲ; ಆ ಪತ್ರಿಕೆಗಳೂ ಅವು ಅಲ್ಲ; ಅದನ್ನು ತಾವು ನೋಡಬಹುದು. ಸೆಪ್ಟೆಂಬರ್ 90 ಎಂದು ಹೇಳಿ ಇದೆ; ಯಾವಾಗಾ ಉತ್ತರ ಕೊಟ್ಟಿದ್ದಾರೆ ಅಂದರೆ 20-11ಕ್ಕೆ ಉತ್ತರ ಕೊಟ್ಟಿದ್ದಾರೆ. ಇನ್‌ವಿಜಿಲೇಟರ್ಸ್ ಇಲ್ಲಿ ಪರ್ಸನ್ ಹಾಕ್ಕಿದ್ದಾರೆ, 20-11ಕ್ಕೆ ಎಂದು ಉತ್ತರ ಕೊಟ್ಟಿದ್ದಾರೆ. ಇನ್ನು ಮುಂದೆ ನಾನು ಕೆಲವರನ್ನು ಇನ್‌ವೈಟ್ ಮಾಡಿ ತಮ್ಮ ಜೊತೆಯಲ್ಲಿ, ಎಲ್ಲರ ಜೊತೆಯಲ್ಲೂ ಸಮಾಲೋಚನೆ ಮಾಡಬೇಕೆಂದು ಇದ್ದೇನೆ. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇದ್ದವರ ಜೊತೆಯಲ್ಲಿ ಚರ್ಚೆಮಾಡಬೇಕೆಂದು ಇದ್ದೇನೆ. ಯಾವರೀತಿ ಇಲ್ಲಿಯೂ ಕೂಡ ಇದು ನಮಗೆ ಬಹಳ ಗುನಾನಿ ಇದೆ. ರಿಪ್ಲೇಸ್‌ಮೆಂಟ್ ಮಾಡತಕ್ಕಂಥ ವಿಚಾರದಲ್ಲಿ ಹೇಳಬೇಕೆಂದರೆ, ಯೂನಿವರ್ಸಿಟಿ ಮಟ್ಟದಲ್ಲಿ, ಪದವಿಪೂರ್ವಮಟ್ಟದಲ್ಲಿ ರಿಪ್ಲೇಸ್‌ಮೆಂಟ್ ಮಾಡುತ್ತಾರೆ. ಏಕೆಂದರೆ, ಈಗ ಇಡತಕ್ಕಂಥ ಸಿಸ್‌ಟಮ್ ತಾವು ನೋಡಿದರೆ ಮೊದಲು ಪೇಜಿನಲ್ಲಿ ಯಾವ ಸೀಲೂ ಹಾಕುವುದಿಲ್ಲ, ಇಲ್ಲಿ ನಂಬರ್ ಇದೆ, ಈ ನಂಬರನ್ನು ನಾವು ಪರ್‌ಫರೇಟ್‌ಮಾಡಬೇಕೆಂದಿದ್ದೇವೆ. ಏಕೆಂದರೆ ಈ ಪದ್ಧತಿ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿದೆ. ಎಲ್ಲಾ ಷೀಟ್‌ನಲ್ಲಿ ಪರಫರೇಟ್ ನಂಬರ್ ಯಾವುದನ್ನು ರಿಪ್ಲೇಸ್ ಮಾಡಲಿಕ್ಕೆ ಆಗುವುದಿಲ್ಲ, ಇದು ನ್ಯೂ ಸಿಸ್ಟಮ್, This is my loud thinking, it is not conclusive.

ಈಗ ಇಲ್ಲಿ ಖಾಲಿ ಷೀಟ್ ಇದೆ, ಉತ್ತರ. ಯಾವ ಷೀಟನ್ನು ತೆಗೆದು ರಿಪ್ಲೇಸ್ ಮಾಡಬಹುದು, ಮಿಸಿಚೀಫ್ ಯಾವುದೇ ಹಂತದಲ್ಲಿ ಮಾಡುವುದು ಇದ್ದರೆ,

ಆದ್ದರಿಂದ, ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬ ಉದ್ದೇಶದಿಂದ ಈ ನಂಬರನ್ನು ಪರಫರೇಟ್ ಮಾಡಿ ಎಲ್ಲಾ ಪೇಜಿನಲ್ಲಿಯೂ ಹಾಕಲಿಕ್ಕೆ ಮತ್ತು ಬೇರೆ ಬೇರೆ ಹಂತದಲ್ಲಿ ಮತ್ತು ಇದನ್ನು ಯಾವ ರೀತಿಯಲ್ಲಿ ನಾವು ಕೊಡಬೇಕು ಎಂದು ಹೇಳಿ, ಮಾಡುತ್ತೇವೆ. ಈಗಿನ ಪದ್ಧತಿ ಬಗ್ಗೆ ಹೇಳುತ್ತೇನೆ. ಅಲ್ಲಿ ಇನ್‌ವಿಜಿಲೇಟರ್ಸ್ ಇರುತ್ತಾರೆ, ಅವರ ಮೇಲೆ ಚೀಫ್ ಎಕ್ಸಾಮಿನರ್ ಎಂದು ಇರುತ್ತಾರೆ. ಆ ಚೀಫ್ ಎಕ್ಸಾಮಿನರ್‌ರಿಂದ ಹಿಡಿದು ನೇರವಾಗಿ ಪಿ.ಯು.ಸಿ. ಬೋರ್ಡ್‌ಗೆ ಬರುವುದಿಲ್ಲ, ಅದು ನೇರವಾಗಿ ಚೀಫ್ ಇನ್‌ವಿಜಿಲೇಟರ್‌ನಿಂದ ಕ್ಯಾಂಪ್ ಆಫೀಸರ್‌ಗೆ ಸ್ಥಳೀಯವಾಗಿ ಹೋಗುತ್ತದೆ. ಈಗ ಉದಾಹರಣೆಗೆ ಹೇಳಬೇಕೆಂದರೆ, ಇಂಗ್ಲೀಷ್ ಪೇಪರ್ ವಿಜಯ ಕಾಲೇಜಿನಲ್ಲಿ ಕರೆಕ್ಷನ್ ಆಗುವುದರಿಂದ ನೇರವಾಗಿ ಆ ಕಾಲೇಜಿಗೆ ಹೋಗುತ್ತದೆ. ಅದು ಹೋಗುವ ಮೊದಲು ಲಕೋಟೆಯಲ್ಲಿ ಹಾಕುತ್ತಾರೆ, ಎಲ್ಲ ಲಕೋಟೆಗಳು ಗೋಣಿಚೀಲದಲ್ಲಿ ಇರುತ್ತದೆ. ಅದಕ್ಕೆ ಅಲ್ಲಿ ಸೀಲ್ ಮಾಡಿರುತ್ತಾರೆ. ಇದು ಏನಾಗಿದೆ, ಆಫ್‌ಟರ್ ಆಲ್ ರದ್ದಿ ಪೇಪರ್. ನನ್ನ ದೃಷ್ಟಿಯಲ್ಲಿ ಇದೂ ಕೂಡ ಬೀದಿಗೆ ಬರುವಂತಾದ್ದು ತಪ್ಪು ಎಂದು ನಾನು ಮನವರಿಕೆ ಮಾಡಿಕೊಂಡಿದ್ದೇನೆ. ಅದು ಏನೇ ಇದ್ದರೂ ಒಂದು ಸಾರ್ವಜನಿಕರ ಮನಸ್ಸಿನಲ್ಲಿ ಇದೇನು ಸರ್ಕಾರಕ್ಕೆ ಸಂಬಂಧಪಟ್ಟ ಪತ್ರಗಳೆಲ್ಲ ಬೀದಿಯಲ್ಲಿ ಬೀಳುತ್ತಿವೆ ಎಂದು ಒಂದು ಹಗುರವಾಗಿ ಮಾತನಾಡತಕ್ಕ ಒಂದು ಪ್ರಮೇಯ ಇದರಿಂದ ಉದ್ಭವವಾಗುತ್ತದೆ. In fact, I wanted to pin down the responsibility today itself and keep the particular officer under suspension.

ಆದರೆ ತುರ್ತಾಗಿ ನಾವು ಇನ್ವೋಸೆಂಟ್ ಪರಸೆನ್ ಮಾಡಬಾರದು; ನನಗೆ ಒಂದು ವಾರ ಕಾಲಬೇಕು. ಅವರು ಸಾಗಿಸುವಾಗ ಗೋಣಿಯಲ್ಲಿ ಹಾಕಿ, ಅದನ್ನು ಲಾರಿಯಲ್ಲಿ ಹಾಕಿ ಗೋಡನ್‌ಗೆ ಸಾಗಿಸಬೇಕಾಗಿತ್ತು. ಅದರ ಬದಲು ಸ್ವಲ್ಪ ನೆಗ್ಲೆಕ್ಟ್ ಮಾಡಿದ್ದಾರೆ. ಏಕೆಂದರೆ ಇದು ರದ್ದಿ ಪೇಪರ್, ಇದು ಎಲ್ಲಾದರೂ ಬಿದ್ದರೂ, ಅಥವಾ ಕಳೆದುಕೊಂಡರೂ ಪರವಾಯಿಲ್ಲ ಎಂದು ಒಂದು ರೀತಿಯಲ್ಲಿ ಆಲೋಚನೆ ಮಾಡಿದ್ದಾರೆ. ಆದರೆ ಆ ರೀತಿ ಮಾಡಿದ್ದೂ ತಪ್ಪು. ಆದ್ದರಿಂದ, ಒಂದು ಸಾಮಾಜಿಕ ಜವಾಬ್ದಾರಿ ಇಲ್ಲದಿದ್ದರೂ ಕೂಡ ಸರ್ಕಾರಿ ಪತ್ರ. ಆದ್ದರಿಂದ, ಈ ರೀತಿ ನೆಗ್ಲೆಕ್ಟ್ ಮಾಡತಕ್ಕದ್ದು ಬಹಳ ತಪ್ಪು ಎಂದು ನನ್ನ ಅಭಿಪ್ರಾಯ ಬಂದಿದೆ. ಆದ್ದರಿಂದ, ಈ ಬಗ್ಗೆ ಯಾರು ಜವಾಬ್ದಾರರು ಎಂದು ಹುಡುಕಿ ಒಂದು ವಾರದಲ್ಲಿ ವರದಿ ಕೊಡಬೇಕೆಂದು ಹೇಳಿ ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನಾನು ಈಗಾಗಲೇ ತಿಳಿಸಿದ್ದೇನೆ. ಆದ್ದರಿಂದ, ಯಾವುದೇ ರೀತಿಯ ತೊಂದರೆ ವಿದ್ಯಾರ್ಥಿಗಳಿಗೆ ಇದರಿಂದ ಆಗತಕ್ಕ ಪ್ರಶ್ನೆ ಇಲ್ಲ; ಈಗ ನಡೆಯತಕ್ಕಂಥ ಪರೀಕ್ಷೆ ಏನಿದೆ, ಇದರ ಪತ್ರಿಕೆಗಳು ಬಹಳ ಕ್ಷೇಮವಾಗಿ ವಿಜಯ ಕಾಲೇಜಿಗೆ ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪಿದೆ. ಯಾವುದೇ ರಿಪ್ಲೇಸ್‌ಮೆಂಟ್ ಅಥವಾ ಅಚಾತುರ್ಯ ಯಾವುದೂ ಆಗಿಲ್ಲ ಎಂದು ಈ ಸದನಕ್ಕೆ ಹೇಳುತ್ತೇನೆ.

ಆದರೆ ಮಾನ್ಯ ವಿರೋಧಪಕ್ಷದ ನಾಯಕರ ಜಾಗೃತಿಗೋಸ್ಕರ ನಾನು ಅವರನ್ನು ಅಭಿನಂದಿಸುತ್ತೇನೆ. ಇದರ ಬಗ್ಗೆ ನಾನು ಒಂದು ಬದಲಾವಣೆಯನ್ನು ತರಬೇಕೆಂದು ಈ ಮೊದಲೇ ಆಲೋಚನೆ ಮಾಡಿದ್ದೆ. ಆದರೆ ಇವತ್ತೇ ಇದರ ಬಗ್ಗೆ ಆಲೋಚನೆ ಮಾಡಿಕೊಂಡು, ಇವತ್ತೇ ಕಾರ್ಯೋನ್ಮುಖವಾಗುವಂತೆ ತಾವು ಒಂದು ಎಚ್ಚರಿಕೆಯನ್ನು ಏನು ಕೊಟ್ಟಿದ್ದೀರಿ, ಇದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಆದರೆ ಈ

ಪ್ರಸಂಗದಲ್ಲಿ ಯಾವುದೇ ಅಚಾತುರ್ಯವೂ ಈ ಪ್ರಸಂಗದಲ್ಲಿ ಆಗಿಲ್ಲವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಉತ್ತರ ಪತ್ರಿಕೆಗಳು ಹೊರಬಿದ್ದಾಗ ಅದು ಶಂಕೆಗೆ ಕಾರಣವನ್ನೂ ಅವರೇ ಊಹಿಸಿದ್ದಾರೆಂಬುದು ನಿರ್ವಿವಾದ. ಇಲ್ಲಿ ಅವರು ಒಂದು ಮಾತನ್ನು ಏನು ಹೇಳಿದ್ದಾರೆಂದರೆ "ಸಾಗಿಸುವಾಗ ಅಚಾತುರ್ಯದಿಂದ ಒಂದು ಉತ್ತರ ಪತ್ರಿಕೆಯ ಲಕೋಟೆ ಬಿದ್ದು ಹೋಗಿದೆ" ಎಂದು. ನಾನಾದರೂ ಹೇಳುತ್ತೇನೆ, ಇದು ಒಂದೇ ಎಂದು ಖಾಯಂ ಆಗಿ ತಿಳಿದುಕೊಳ್ಳುವುದು ಬೇಡ. ಮತ್ತೊಂದು ಇಂಥ ಪ್ರಕರಣ ಆಗಾಗ ಉತ್ತರವನ್ನು ಹೇಳುವಂಥ ಸ್ಥಿತಿಗೆ ಸರ್ಕಾರ ಬರಬಾರದು. ಆದ್ದರಿಂದ ತಮ್ಮ ಎಚ್ಚರಿಕೆಗಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಬಹಳ ತರಾತುರಿಯಿಂದ ಹೋದಿರಿ. ಜವಾಬ್ದಾರಿಯಿಂದ ತುರ್ತಾಗಿ ತನಿಖೆಯನ್ನು ನಡೆಸಿದ್ದೀರಿ. ಇದರ ಬಗ್ಗೆ ಇನ್ನೂ ಹೆಚ್ಚಿನ ಬೆಳಕು ಚೆಲ್ಲಬಹುದು. ಇನ್ನೂ ಸಮಗ್ರವಾಗಿ ಇದರ ಬಗ್ಗೆ ತನಿಖೆ ಮಾಡಿಸಬೇಕು. ಇನ್ನೂ ಭಾರಿಮಟ್ಟದಲ್ಲಿ ತನಿಖೆ ಮಾಡಿಸುವುದಕ್ಕೆ ಸಾಧ್ಯವೇ? ಸಧ್ಯಕ್ಕೆ ತಾವು ಒಂದು ಉತ್ತರವನ್ನು ಕೊಟ್ಟಿದ್ದೀರಿ. ನಮಗೆ ಸಿಕ್ಕಿದ್ದು ಒಂದೇ ಒಂದು ಲಕೋಟೆ, ಅದು ಎಲ್ಲೋ ಬಿದ್ದು ಹೋಗಿತ್ತು, ಅದು ವಿರೋಧಪಕ್ಷದ ನಾಯಕರ ಕೈಗೆ ಸಿಕ್ಕಿದ್ದು ಅಂತ ಅಲ್ಲ. ಇಂಥ ಲಕ್ಕೋಟೆಗಳು ಇನ್ನೂ ಎಷ್ಟೋ ಬಿದ್ದುಹೋಗಿರಬಹುದು. ಇದರಲ್ಲಿ ಒಂದಕ್ಕೊಂದು ಸಂಬಂಧಪಟ್ಟಂತೆ ಉದ್ಭವವಾಗುತ್ತವೆ. ತಮ್ಮ ಪ್ರಾಮಾಣಿಕತೆಯ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ. ತಾವು ಜವಾಬ್ದಾರಿಯಿಂದ ತಕ್ಷಣ ಗಮನಹರಿಸಿ ಕ್ರಮ ತೆಗೆದುಕೊಂಡು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಇದಕ್ಕಿಂತಲೂ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಲು ತಾವು ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸುವುದಕ್ಕೆ ಯೋಚನೆ ಮಾಡಿದ್ದೀರಾ? ನಾವು ತಮ್ಮನ್ನು ಒತ್ತಾಯ ಮಾಡುವುದಿಲ್ಲ.

ಇಂಥ ಉತ್ತರ ಪತ್ರಿಕೆಗಳು ಬೀದಿಯಲ್ಲಿ ಬಿದ್ದಿದ್ದರೆ, ಆಗಿಂದಾಗ್ಗೆ ಇಂಥಾದ್ದು ನಡೆಯುತ್ತಿದ್ದರೆ, ಸಾರ್ವಜನಿಕ ಹಿತದೃಷ್ಟಿಯಲ್ಲಿ ಇದು ನಮಗೂ ಕ್ಷೇಮವಲ್ಲ, ನಿಮಗೂ ಕ್ಷೇಮವಲ್ಲ. ಅಷ್ಟೇ ಅಲ್ಲ ಸರ್ಕಾರಕ್ಕೂ ಕೂಡ ಗೌರವವನ್ನು ತರುವುದಿಲ್ಲ. ಆದ್ದರಿಂದ, ಮುಂದೆ ಇಂಥಾದ್ದು ಆಗದ ರೀತಿಯಲ್ಲಿ, ಇದರ ಹಿಂದೆ ಏನಿರಬಹುದೆಂದೆಂಬುದನ್ನು ಪತ್ತೆ ಹಚ್ಚುವುದಕ್ಕೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸಲು ಒಂದು ತೀರ್ಮಾನಕ್ಕೆ ತಾವು ಬರುತ್ತೀರಾ?

ಶ್ರೀ ಎಂ.ಪಿ. ವೆಂಕಟೇಶ್ : ಸಾಗಿಸುವಾಗ ಪತ್ರಿಕೆಗಳು ಬಿದ್ದು ಹೋಗಿವೆ ಎಂದು ಮಾನ್ಯ ಮಂತ್ರಿಗಳು ಬಹಳ ಸುಲಭವಾಗಿ ಹೇಳಿದರು. ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಆಗಿದ್ದರೆ ಇನ್ನೊಂದು ಸಾರಿ ಇದೇರೀತಿ ಪತ್ರಿಕೆಗಳು ಬಿದ್ದು ಹೋಗಿದ್ದವು ಎಂದು ಮಂತ್ರಿಗಳು ಉತ್ತರ ಕೊಡಬಹುದು. ಆದ್ದರಿಂದ ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಸಮಂಜಸವಾಗುವುದಿಲ್ಲ. ಆದ್ದರಿಂದ ಒಂದು ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ : ಪಿ. ಯು.ಸಿ. 2 ನೇ ವರ್ಷದ ಪರೀಕ್ಷೆಯಲ್ಲಿ ಬ್ಲ್ಯಾಂಕ್ ಪೇಪರ್‌ಗಳನ್ನು ಕೆಲವು ಸೆಂಟರ್‌ಗಳವರು ಕೊಡುತ್ತಾರೆ. ನಂತರ ಅದನ್ನು

ಬೆಂಗಳೂರಿನಲ್ಲಿ ಬರೆಸತಕ್ಕ ಪದ್ಧತಿ ಬಹಳ ಇದೆ. ಆಮೇಲೆ ಅತಿ ಹೆಚ್ಚಿಗೆ ಮಾರ್ಕ್ಸ್ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಯಾರಿಗೆ ನೂರಕ್ಕೆ 96-97-98 ಅಂಕಗಳು ಯಾರಿಗೆ ಬರುತ್ತವೆ ಅಂಥವರ ಉತ್ತರ ಪತ್ರಿಕೆಗಳನ್ನು ಮತ್ತೊಮ್ಮೆ ವ್ಯಾಲ್ಯೂ ಮಾಡಿಸಬೇಕು. ಆದರೆ ಬಾಟನಿ, ಬಯಾಲಜಿ, ಕೆಮಿಸ್ಟ್ರಿ ಪೇಪರ್‌ಗಳಲ್ಲೂ ಕೂಡ ನೂರಕ್ಕೆ 97-98 ಅಂಕಗಳನ್ನು ತೆಗೆದುಕೊಂಡು ಮೆಡಿಕಲ್ ಸೀಟ್ ಪಡೆಯಲು ಪ್ರಯತ್ನ ಮಾಡುತ್ತಾರೆ. ಬ್ಲ್ಯಾಂಕ್ ಪೇಪರ್‌ನ್ನು ಸೆಂಟರ್‌ಗಳಲ್ಲಿ ಕೊಟ್ಟು ಅನಂತರ ಬೆಂಗಳೂರಿನಲ್ಲಿ ಅದರಲ್ಲಿ ಬರೆಸತಕ್ಕ ಕೆಲಸ ಬಹಳವಾಗಿ ನಡೆಯುತ್ತಿದೆ. ಈಗ 4 ಸೆಂಟರ್‌ಗಳಲ್ಲಿ ಮಾಡಿದ್ದಾರೆ. ಆದ್ದರಿಂದ, ತಾವು ಇಂಥ ಹೆಚ್ಚು ಅಂಕಗಳನ್ನು ತೆಗೆದುಕೊಂಡಿರತಕ್ಕ ಪತ್ರಿಕೆಗಳನ್ನು ಬೇರೆ ಬೇರೆ ಜಾಗಗಳಲ್ಲಿ ವ್ಯಾಲ್ಯೂಯೇಷನ್ ಮಾಡಿಸುವುದರಿಂದ ಇಂಥಾದ್ದು ಕಡಿಮೆಯಾಗಬಹುದೆಂಬುದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ: ಸನ್ಮಾನ್ಯ ಸಭಾಧ್ಯಕ್ಷರೇ, ಈ ಪ್ರಶ್ನೆಪತ್ರಿಕೆ ಬಯಲಾಗತಕ್ಕಂಥದ್ದು ಸರ್ವೇಸಾಮಾನ್ಯವಾಗಿ ಹೋಗಿಬಿಟ್ಟಿದೆ. ಎಷ್ಟೇ ಬಿಗಿ ಮಾಡಿದರೂ ಸಹಿತ ಒಂದಲ್ಲ ಒಂದು ರೀತಿಯಲ್ಲಿ ಇದು ಬಯಲಾಗತಕ್ಕಂಥದ್ದು ನಡೆದೇ ಬಂದಿದೆ. ಆದರೆ ಕಳೆದಸಾರಿ ವಿಧಾನ ಸಭಾ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ನಾವೆಲ್ಲ ಪ್ರಸ್ತಾಪ ಮಾಡಿದೆವು. ಈ ಒಂದು ನಿಟ್ಟಿನಲ್ಲಿ ಪರೀಕ್ಷೆ ವಿಧಾನವನ್ನೇ ಬದಲಾವಣೆ ಮಾಡಬೇಕೆನ್ನತಕ್ಕಂಥದ್ದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳುವುದೇನೆಂದರೆ ಒಂದೇ ಒಂದು ಬಂಡಲ್ ಬಿದ್ದಿದ್ದೆಂದು ನಾನೇನು ಹೇಳಲಿಲ್ಲ. ನನ್ನ ಹೇಳಿಕೆಯನ್ನು ದಯವಿಟ್ಟು ತಾವು ನೋಡಬೇಕು. ರದ್ದಿ ಕಾಗದಗಳನ್ನು ಸಾಗಿಸುವಾಗ ಅಚಾತುರ್ಯದಿಂದ ಒಂದು ಉತ್ತರ ಪತ್ರಿಕೆ ಲಕೋಟೆ ಜಾರಿಬಿದ್ದು ಬೀದಿ ಪಾಲಾಗಿರಬಹುದು; I have not precisely said that. ಒಂದು ಬಿದ್ದಿರಬಹುದು ಅಥವಾ ಎರಡು ಬಿದ್ದಿರಬಹುದು ಅದು ನನಗೆ ಗೊತ್ತಿಲ್ಲ.

(ಗೊಂದಲ)

ಸನ್ಮಾನ್ಯ ಅಧ್ಯಕ್ಷರೇ, ಇವತ್ತಿಗೆ ಉದ್ಭವವಾದಂಥ ಪ್ರಶ್ನೆ ಏನಿದೆ ವೇಸ್ಟ್ ಪೇಪರ್ ಎಂದು ಹೇಳಿದ್ದೇನೆ. ರದ್ದಿಪೇಪರ್. That was not the answer paper.

ಆದ್ದರಿಂದ ಅದನ್ನು ಗೋಡೌನ್‌ಗೆ ಸಾಗಿಸಲಿಕ್ಕೆ ಹೋಗಿದ್ದಾರೆ. ಹೋಗುವಾಗ ಇದು ಬಿದ್ದಿದೆ ಎಂದು ಹೇಳಿದ್ದೇನೆ. ಇದರಲ್ಲಿ ಜಾಲದ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಏನಾದರೂ ಜಾಲದ ಪ್ರಶ್ನೆ ಇದ್ದರೆ, ಅದರ ಬಗ್ಗೆ ಯಾವುದೇ ವಿಚಾರಣೆ ಮಾಡುವುದಕ್ಕೆ ನಾನು ಹೆದರುವುದಿಲ್ಲ. ಅದನ್ನು ಮಾಡುತ್ತೇನೆ. There is no cause of action for any enquiry whatsoever.ತಕ್ಕದ್ದಲ್ಲ. ' ಏತಕ್ಕೆಂದರೆ That way we will be suspecting the real talented people also.

ಅವರೂ ಜೊತೆಯಲ್ಲಿ ಸೇರುತ್ತಾರೆ. ಆ ರೀತಿ ಅನುಮಾನ ಮಾಡತಕ್ಕಂಥಾದ್ದು, ಅವರನ್ನು ಪ್ರಶ್ನೆ ಮಾಡತಕ್ಕಂಥದ್ದು ಅದು ಯುಕ್ತವಲ್ಲ. ತಾವು ಹೇಳಬಹುದು. ಇಲ್ಲಿ ಎರಡು ಪ್ರಶ್ನೆಗಳಿವೆ. ಒಂದು ಆ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ, ಮತ್ತು ವ್ಯಾಲ್ಯುಯೇಷನ್ ಈ ವ್ಯವಸ್ಥೆಯನ್ನು ನಾವು ಪುನರ್ ವ್ಯವಸ್ಥೆ ಮಾಡಿ, ಇದಕ್ಕೆ ಅವಕಾಶ ಇಲ್ಲದಿರತಕ್ಕಂಥ ಪರಿಸ್ಥಿತಿ ನಿರ್ಮಾಣ ಮಾಡಬೇಕೆಂದೇ ನನ್ನ ಪ್ರಯತ್ನ. ಆ ದೃಷ್ಟಿಯಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ಪ್ರಶ್ನೆ ಪತ್ರಿಕೆ ಬಯಲಾಗದ ರೀತಿಯಲ್ಲಿ ಪ್ರಶ್ನೆ ಬಂದ ಕೂಡಲೇ ಒಂದು ರೀತಿಯ ಉತ್ತರವನ್ನು ಒಂದು ರೀತಿಯ ಪುನರ್ ವ್ಯವಸ್ಥೆಯನ್ನು

ಈಗಾಗಲೇ ಮಾಡಿದ್ದೇವೆ. ಆ ಪುನರ್ ವ್ಯವಸ್ಥೆಯನ್ನೂ ಕೂಡ ಅನುಷ್ಠಾನ ಕೂಡ ಮೊನ್ನೆ 26ನೇ ತಾರೀಖು ನಡೆದಂತ ಡಿಸೆಂಬರ್‌ನಲ್ಲಿ ಮಾಡಿದ್ದೇವೆ. ನಾವು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ, ಇನ್ನು ಅದಕ್ಕೆ ಏನಾದರೂ ಇಂಪ್ರೂವ್‌ಮೆಂಟ್ ಮಾಡಬೇಕೆಂದು ಹೇಳಿದರೆ, ಅದಕ್ಕೆ ಒಂದು ಸಣ್ಣ ತಜ್ಞರ ಸಮಿತಿಯನ್ನು ಮಾಡಬೇಕೆಂದು ಹೇಳಿ ನಾನು ನನ್ನ ಹೇಳಿಕೆಯಲ್ಲಿ ಕೊಟ್ಟಿದ್ದೇನೆ. ಎರಡನೆಯದಾಗಿ ಪುನರ್ ವ್ಯವಸ್ಥೆ ಮಾಡತಕ್ಕಂಥ ಸೂಚನೆ ಏನು ಕೊಟ್ಟಿದ್ದೆ, ಯೂನಿಯನ್ ಪಬ್ಲಿಕ್ ಸರ್ವೀಸ್ ಕಮೀಷನ್ ಮಾಡತಕ್ಕಂಥ ಮಾದರಿಯಲ್ಲಿ ಮತ್ತು ಪರ್‌ಪರೇಟ್ ಮಾಡತಕ್ಕಂಥ ಎಲ್ಲ ಸೀಟ್‌ನಲ್ಲಿ, ಎಲ್ಲ ಹಾಳೆಗಳಲ್ಲಿ ಅದು ಬರತಕ್ಕಂಥದ್ದನ್ನೂ ಕೂಡ ಇದು ಒಂದು ಮತ್ತು ಇನ್ನೊಂದು 2-3 ಪುನರ್ ವ್ಯವಸ್ಥೆಯ ಬಗ್ಗೆ ಕೆಲವು ಸೂಚನೆಗಳಿವೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ : ಪರಪರೇಟ್ ಏನು ಇದೆ, ಅದೇನು ದೊಡ್ಡ ವಿಷಯವಲ್ಲ, ನಂಬರ್ಸನ್ನು ಪರ್‌ಪರೇಟ್ ಮಾಡುವುದೆಂದು ಗೊತ್ತಾಯಿತು.

SRI M. VEERAPPA MOILY : That will be more foolproof because even in many Western countries they do it.

ಇಲ್ಲೂ ಕೂಡ, ಯಾವುದೇ ರೀತಿಯಲ್ಲಿ ರಿಪ್ಲೇಸ್ ಮಾಡತಕ್ಕಂಥ ವ್ಯವಹಾರವನ್ನು ತಕ್ಷಣ ನಿಲ್ಲಿಸಬೇಕು. ಅದೂ ಅಲ್ಲದೆ ಬೇರೆ ಯಾವುದಾದರೂ ಸೂಚನೆಗಳನ್ನು ತಾವು ಕೊಡುವುದಿದ್ದರೂ ಕೂಡ ತಾವು ದಯವಿಟ್ಟು ಕೊಡಿ: ನಾವು ಸ್ವೀಕಾರ ಮಾಡುತ್ತೇವೆ. ಇದಕ್ಕಾಗಿ ತಜ್ಞರ ಒಂದು ಸಮಿತಿಯನ್ನು ಕೂಡ ನಾವು ತಕ್ಷಣದಲ್ಲಿ ಮಾಡಿಲಿಕ್ಕೆ ಇದ್ದೇವೆ. ಆದ್ದರಿಂದ ತಾವು ಏನಾದರೂ ಸ್ಪೆಸಿಫಿಕ್ ಆಗಿ ಇಂಥದ್ದು ಇದ್ದರೆ ವಿಚಾರಣೆ ಮಾಡೋಣ. ಆದರೆ ಇವತ್ತಿನ ಪ್ರಕರಣವೇ ಬೇರೆ ಆಗಿದೆ. ಇಲ್ಲಿಗೆ ಯಾವುದೇ ಒಂದು ತರ್ಕಕ್ಕೆ ಕಾರಣಬೇಕು. ಈಗ ಏನಾಗಿದೆ ಎಂದರೆ ಈಗ ಹೇಳತಕ್ಕಂಥದಕ್ಕೆ ಕಾರಣಗಳಿಲ್ಲ, ಆದ್ದರಿಂದ ತಾವು ಹೇಳಿದಹಾಗೆ ಏನಾದರೂ ಒಂದು ಜಾಲ ಇದ್ದರೆ ನಾನು ಅದರ ಬಗ್ಗೆ ವಿಚಾರಮಾಡಲಿಕ್ಕೆ ಸಿದ್ಧನಿದ್ದೇನೆ. ಏತಕ್ಕೆಂದರೆ ಪ್ರಶ್ನೆ ಪತ್ರಿಕೆ ಬಯಲಾದ ಬಗ್ಗೆ ಯಾವ ರೀತಿ ಒಂದು ಜಾಲ ಇದೆ ಎಂದು ಹೇಳಿ, ಅದನ್ನು ಹುಡುಕಲಿಕ್ಕೆ ನಾವು ಈಗಾಗಲೇ ಸಿ.ಓ.ಡಿ.ಗೆ ಆದೇಶ ಕೊಟ್ಟಿದ್ದೇವೆ. ಅದು ನಡೆಯುತ್ತಿದೆ. ಇನ್ನು ಎರಡನೇಯದಾಗಿ ಇಂಥ ಜಾಲಗಳು ಅಲ್ಲಲ್ಲಿ ಇವೆ ಎಂದ ನಮಗೆ ಕೆಲವು ವರ್ತಮಾನಗಳು ಬಂದಿವೆ. ಇದು ಈಗಿನ ಪ್ರಕರಣಕ್ಕೆ ಸಂಬಂಧಪಟ್ಟದ್ದಲ್ಲ, ಕೆಲವು ಜಾಲಗಳಿವೆ ಎಂದು ಹೇಳಿ ಕೆಲವು ವರ್ತಮಾನಗಳು ನಮಗೆ ಬಂದಿದೆ. ಅದರ ಬಗ್ಗೆ ಹೇಗೆ ವಿಚಾರಣೆ ಮಾಡಬೇಕು ; ಹೇಗೆ ಅದರ ಬಗ್ಗೆ ಮಾಹಿತಿ ಸಂಗ್ರಹ ಮಾಡಬೇಕು, I have already set the people in motion.

ಮತ್ತೆ ಇನ್ನು ಮುಂದೆ ಯಾವರೀತಿಯಿಂದಲೂ ಮಾಲ್‌ಪ್ರಾಕ್ಟೀಸ್ ಕೂಡ ಮಾಡಬಾರದು. ಅದನ್ನು ನಿಲ್ಲಿಸಬೇಕು. ಏತಕ್ಕೆಂದರೆ ಶಿಕ್ಷಣ ಕ್ಷೇತ್ರದ ಒಂದು ನೀತಿಯ ಪ್ರಶ್ನೆ ಇದಾಗಿದೆ.

ಮತ್ತೆ ಇದು ಒಂದು ಪಾವಿತ್ರತೆಯ ಪ್ರಶ್ನೆ, ಈ ಪಾವಿತ್ರತೆ ಮತ್ತು ಆ ಶಿಕ್ಷಣದಲ್ಲಿರತಕ್ಕಂಥ ಒಳ್ಳೆಯ ವಿದ್ಯಾರ್ಥಿಗಳೂ ಕೂಡ ಅವರ ಮೇಲೆ ಒಂದು ರಿಫ್ಲೆಕ್ಷನ್ ಮಾಡತಕ್ಕಂಥ ಮತ್ತು ಜನರಿಗೆ ಒಂದು ರೀತಿಯ ದುರಭಿಪ್ರಾಯ ಬರತಕ್ಕಂಥ ವಾತಾವರಣ ಅಲ್ಲಿ ಇರಲೇಬಾರದು.

ಅದ್ದರಿಂದ ಈ ವ್ಯವಸ್ಥೆ ಬಗ್ಗೆ ಸರಿಪಡಿಸಲು ದಯಮಾಡಿ ನನಗೆ ಸ್ವಲ್ಪ ಸಮಯ ಕೊಡಿ. ತಮ್ಮ ಸಲಹೆ ಕೂಡ ಕೊಡಿ. ಬಹುಶ: ಮುಂದೆ ಬರುವ ಪರೀಕ್ಷೆ ಮೊದಲು ಏನು ಸುಧಾರಣೆಯನ್ನು ಪುನರ್‌ವ್ಯವಸ್ಥೆಯನ್ನು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಏನಾದರೂ ಜಾಲ ಯೂನಿವರ್ಸಿಟಿ ಮಟ್ಟದಲ್ಲಿ ಅಥವಾ ಫ್ರೀಯೂನಿವರ್ಸಿಟಿ ಮಟ್ಟದಲ್ಲಿ ಇದ್ದರೆ ಆ ಜಾಲವನ್ನು ಮೂಲೋತ್ಪಾಟನೆ ಮಾಡತಕ್ಕ ಕಾರ್ಯಕ್ರಮವನ್ನು ಖಂಡಿತ ನಾವು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈಗ ಒಂದು ಹೇಳಿದರೆ ನೀಡುತ್ತಾರೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ : (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು) :

ಮಾನ್ಯ ಉಪಾಧ್ಯಕ್ಷರೇ,

ದಿನಾಂಕ 21-12-1990 ರಂದು ಈ ಸದನದಲ್ಲಿ ಮಾನ್ಯ ಸದಸ್ಯರು ರಾಜ್ಯದಲ್ಲಿ ಅಗತ್ಯ ವಸ್ತುಗಳಾದ ಸಕ್ಕರೆ, ಗೋಧಿ, ಅಕ್ಕಿ, ಡಿಸೈಲ್ ಮತ್ತು ಸೀಮೆಎಣ್ಣೆ ಮತ್ತು ತಾಳೆ ಎಣ್ಣೆ ದಾಸ್ತಾನು ಇಲ್ಲದಿದ್ದರಿಂದ ಮುಕ್ತಮಾರುಕಟ್ಟೆಯಲ್ಲಿ ಬೆಲೆಗಳು ಹೆಚ್ಚಾಗಿದ್ದು ಅದರಲ್ಲೂ ಖಾದ್ಯತೈಲಗಳು ಬೆಲೆ ಅತಿ ಹೆಚ್ಚಾಗಿರುವ ಬಗ್ಗೆ ತೀವ್ರ ಕಳಕಳಿ ವ್ಯಕ್ತಪಡಿಸಿದ್ದು ಸರಿಯಷ್ಟೆ.

ಆ ಸಂದರ್ಭದಲ್ಲಿ ನಾನು ಇದೇ ವಿಷಯದ ಬಗ್ಗೆ ದೆಹಲಿಗೆ ಹೋಗಿ ಸಂಬಂಧಿಸಿದ ಕೇಂದ್ರ ಸಚಿವರೊಡನೆ ಚರ್ಚಿಸಿ, ರಾಜ್ಯಕ್ಕೆ ಹೆಚ್ಚುವರಿ ಅಗತ್ಯವಸ್ತುಗಳನ್ನು ಬಿಡುಗಡೆ ಮಾಡಲು ಒತ್ತಾಯಿಸುವುದಾಗಿ ಭರವಸೆ ನೀಡಿದ್ದೆ. ಅದರಂತೆ ಇದೇ ದಿನಾಂಕ 22 ಮತ್ತು 23 ರಂದು ಕೇಂದ್ರದ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾದ ಶ್ರೀ ರಾವ್ ಬಿರೇಂದ್ರ ಸಂಘ್ ಮತ್ತು ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳ ಖಾತೆಯ ಸಚಿವರಾದ ಶ್ರೀ ಸತ್ಯಪ್ರಕಾಶ್ ಮಾಳವೀಯ ಅವರನ್ನು ಭೇಟಿಮಾಡಿ ರಾಜ್ಯದಲ್ಲಿರುವ ಅಗತ್ಯವಸ್ತುಗಳ ಕೊರತೆ ಮತ್ತು ಜನತೆಯಲ್ಲಿ ಉಂಟಾಗಿರುವು ಆತಂಕಗಳನ್ನು ಸಚಿವದ್ವಯರಿಗೆ ಮನದಟ್ಟು ಮಾಡಿದ್ದೇವೆ.

ಸದನಕ್ಕೆ ಈಗಾಗಲೇ ತಿಳಿಸಿರುವಂತೆ ರಾಜ್ಯಕ್ಕೆ 30 ಸಾವಿರ ಮೆ. ಟ. ಗೋಧಿ, 45 ಸಾವಿರ ಮೆ.ಟಿ. ಅಕ್ಕಿ 17,780 ಮೆ. ಟಿ. ಸಕ್ಕರೆ, 87,,587 ಮೆ. ಟಿ. ಡಿಸೈಲ್, 4 ಸಾವಿರ ಮೆ. ಟಿ. ತಾಳೆ ಎಣ್ಣೆ ಮತ್ತು 50ಸಾವಿರ ಕೆ. ಮ್. ಸೀಮೆ ಎಣ್ಣೆ ಪ್ರತಿ ತಿಂಗಳಿಗೆ ಹಂಚಿಕೆಗೆ ಬಿಡುಗಡೆ ಮಾಡಲಾಗುತ್ತದೆ. ನವೆಂಬರ್ ತಿಂಗಳಿಗೆ ಬಿಡುಗಡೆಯಾಗಿದ್ದ 4 ಸಾವಿರ ಮೆ. ಟಿ. ತಾಳೆ ಎಣ್ಣೆಯಲ್ಲಿ ಕೇವಲ 706 ಮೆ. ಟ. ಮಾತ್ರ ಲಭ್ಯವಿದ್ದು ಉಳಿದ ದಾಸ್ತಾನು ಮಂಗಳೂರು ಬಂದರಿನಲ್ಲಿ ಇರಲಿಲ್ಲ. ಅಲ್ಲದೇ ಡಿಸೆಂಬರ್ ತಿಂಗಳಿಗೆ ತಾಳೆ ಎಣ್ಣೆ ಹಂಚಿಕೆ ಬಂದಿರುವುದಿಲ್ಲ. ಇದರಿಂದ ಮುಕ್ತ ಮಾರುಕಟ್ಟೆಯಲ್ಲಿ ಖಾದ್ಯ ತೈಲದ ಬೆಲೆ ಹೆಚ್ಚಿರುವುದು ಎಲ್ಲಾರ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ ಎಂಬ ಅಂಶವನ್ನು ಗಮನಿಸಿದ್ದೀರಿ.

ದೆಹಲಿಯಲ್ಲಿ ಕೇಂದ್ರದ ಸಂಬಂಧಿಸಿದ ಇಬ್ಬರೂ ಸಚಿವರೊಡನೆ ಮಾಡಿದ ಫಲಪ್ರದ ಚರ್ಚೆಯ ಪರಿಣಾಮವಾಗಿ ಕೂಡಲೇ ರಾಜ್ಯಕ್ಕೆ ಹೆಚ್ಚುವರಿ ಅಗತ್ಯವಸ್ತುಗಳ ಹಂಚಿಕೆ ಮಾಡುವುದಾಗಿ ಆಶ್ವಾಸನೆ ನೀಡಿದ್ದಾರೆ. ಅದರಂತೆ ತಿಂಗಳಿಗೆ ಹೆಚ್ಚುವರಿಯಾಗಿ ಅಂದರೆ ಈ ತಿಂಗಳಿಂದಲೇ 4 ಸಾವಿರ ಮೆ. ಟ. ಡಿಸೇಲ್ 10 ಸಾವಿರ ಮೆ.ಟ. ಗೋಧಿ, 500 ಮೆ. ಟ. ಸಕ್ಕರೆ ಹಂಚಿಕೆ ಮಾಡುವುದಾಗಿಯೂ ಮತ್ತು ಪಂಜಾಬ ಅಕ್ಕಿಯ

ಬಗ್ಗೆ ಗ್ರಾಹಕರಿಂದ ಸಾಕಷ್ಟು ದೂರುಗಳು ಬಂದಿದ್ದರಿಂದ ಅದಕ್ಕೆ ಬದಲಾಗಿ ರಾಜ್ಯಕ್ಕೆ ಆಂಧ್ರದ ಅಕ್ಕಿ ಸರಬರಾಜು ಮಾಡಲು ಒಪ್ಪಿದ್ದಾರೆ. ತಾಳೆ ಎಣ್ಣೆ ಬಗ್ಗೆ ಹೇಳುವುದಾದರೆ ಅತಿ ಶೀಘ್ರವೇ ದಾಸ್ತಾನನ್ನು ಮುಂಬೈ ಬಂದರಿನಿಂದ ಸಾಧ್ಯವಾದಷ್ಟು ಬೇಗ ಒದಗಿಸಲು ವಿಪ್ರಾಡು ಮಾಡುವುದಾಗಿ ಕೇಂದ್ರ ಸರ್ಕಾರ ಆಶ್ವಾಸನೆ ನೀಡಿದೆ. ಇದರಿಂದ ತಾಳೆಎಣ್ಣೆ ಸರಬರಾಜು ಸುಧಾರಿಸಿ ಮುಕ್ತ ಮಾರುಕಟ್ಟೆಯಲ್ಲಿ ಖಾದ್ಯ ತೈಲದ ಬೆಲೆ ನಿಯಂತ್ರಣಗೊಳ್ಳುವ ನಿರೀಕ್ಷೆ ಇದೆ.

ಮಾನ್ಯ ಉಪಾಧ್ಯಕ್ಷರೇ : ಹೊಸ ವರ್ಷದ ಕೊಡುಗೆಯಾಗಿ ಪಡಿತರ ಚೀಟಿದಾರರಿ ಹೆಚ್ಚುವರಿ ಗೋಧಿ ಮತ್ತು ಹಬ್ಬಕ್ಕಾಗಿ ಸಕ್ಕರೆಯನ್ನು ವಿತರಿಸಲಾಗುವುದೆಂದು ತಿಳಿಸಲು ಹರ್ಷಿಸುತ್ತೇವೆ. ಇದೇ ಸಂದರ್ಭದಲ್ಲಿ ನಾವು ಕೇಂದ್ರದ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಪೆಟ್ರೋಲಿಯಂ ಮತ್ತು ರಸಾಯನಿಕ ವಸ್ತು ಖಾತೆಯ ಸಚಿವದ್ವಯರುಗಳಿಗೆ ನಮ್ಮ ಕೋರಿಕೆಗೆ ಸ್ಪಂದಿಸಿದ್ದಕ್ಕಾಗಿ ರಾಜ್ಯದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ಇದೇ ಸನ್ನಿವೇಶದಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಸುಧಾರಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದೆಂದು ಈ ಸದನಕ್ಕೆ ಭರವಸೆ ನೀಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಸದನದಲ್ಲಿ ಹೇಳಿಕೆ ಕೊಟ್ಟ ಪ್ರಕಾರ ಕೇಂದ್ರ ಸರ್ಕಾರಕ್ಕೆ ಹೋಗಿ ರಾಜ್ಯದ ಜನತೆಯ ಪರವಾಗಿ ಅವರು ಕಳಕಳಿಯನ್ನು ವ್ಯಕ್ತಪಡಿಸಿ ಜನರಿಗೆ ಹೆಚ್ಚುವ ಆಹಾರ ಧಾನ್ಯ ವಿತರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆವತ್ತು ಅವರು ಹೇಳಿದಂಥ ಮಾತು ನೋಡಿದಾಗ ಎಷ್ಟರಮಟ್ಟಿಗೆ ಪ್ರಯತ್ನ ಮಾಡುತ್ತಾರೋ ಎಂದು ಈ ಸದನ ಸಂಶಯ ವ್ಯಕ್ತಮಾಡಿತ್ತು. ಇಂದು ನೋಡಿದರೆ ಅವರು ನಿಜವಾಗಿಯೂ ಜನತೆಯ ಪರವಾಗಿ ಕಳಕಳಿಯ ಪ್ರಯತ್ನ ಮಾಡಿದ್ದಾರೆ. ಜನರಿಗೆ ಆಹಾರ ವಸ್ತುಗಳು ದೊರಕಿಸುವುದಕ್ಕೆ ಪ್ರಯತ್ನ ಮಾಡಿರುವುದರಿಂದ ನಿಜವಾಗಿಯೂ ಅವರು ಅಭಿನಂದನಾರ್ಹರು.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷಣೆಯವರೇ, ಈ ವಿಷಯವನ್ನು ಸದನದಲ್ಲಿ ನಾನೇ ಪ್ರಸ್ತಾಪ ಮಾಡಿದ್ದು. ಕೇಂದ್ರ ಸರ್ಕಾರದವರು ಕೊಡುತ್ತಾರೆ ಎಂಬ ಭರವಸೆ ಇತ್ತು. ಅದಲ್ಲ ಪ್ರಶ್ನೆ. ನಾವು ಮುಖ್ಯವಾಗಿ ವಿತಕ್ಕೆ ಇದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದು ಎಂದರೆ, ನಿಮ್ಮ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡೈರೇಕ್ಟೊರೇಟ್‌ನಿಂದ ಸರ್ಕ್ಯುಲರ್ ಕಳುಹಿಸಿದ್ದಾರೆ. ತಾಳೆ ಎಣ್ಣೆ ತೆಗೆದುಕೊಂಡು ಬರುವುದಕ್ಕೆ ಕೇಂದ್ರಸರ್ಕಾರದಿಂದ ನೀವು ಪ್ರಯತ್ನ ಮಾಡುವುದಕ್ಕಿಂತ ಮುಂಚೆ, ನೀವು ಡೆಲ್ಲಿಗೆ ಹೋಗುವುದಕ್ಕಿಂತ ಮುಂಚೆಯೇ ಎರಡು ತಿಂಗಳು ಅವರು ಕಳಿಸುವುದಿಲ್ಲವೆಂದು ಸುತ್ತೋಲೆ ಕಳಿಸಿದ್ದೀರಿ. ಅದರಿಂದ ಎಣ್ಣೆ ಬೆಲೆ ಪ್ರೈವೇಟ್ ಸೆಕ್ಟರ್‌ನಲ್ಲಿ ಜಾಸ್ತಿ ಆಗುತ್ತದೆ ಎಂಬುದು ಒಂದು. ಅದರ ಸಪ್ಲೈ ಸರಿಯಿಲ್ಲ ಎಂಬುದು ಒಂದಾದರೆ ಎರಡನೆಯದು ಟಿ.ಎ.ಪಿ.ಸಿ.ಎಂ.ಎಸ್.ಗಳು ಟ್ರಾನ್ಸ್‌ಪೋರ್ಟಿಂಗ್ ಏಜೆನ್ಸಿಗಳು. ಅವರಿಗೆ ಬಿಡುಗಡೆ ಮಾಡತಕ್ಕ ಹಣ ಬಿಡುಗಡೆ ಮಾಡಲಿಲ್ಲ. ಕರ್ನಾಟಕ ಸರ್ಕಾರದಿಂದ ಕೊಡತಕ್ಕ ಸಬ್ಸಿಡಿ ಹಣ ಕೊಟ್ಟಿಲ್ಲ. ರಾಜ್ಯದಲ್ಲಿರುವ 175 ಟಿ.ಎ.ಪಿ.ಸಿ.ಎಂ.ಎಸ್.ಗಳ ಪೈಕಿ ಒಂದೊಂದು ಟಿ.ಎ.ಪಿ.ಸಿ.ಎಂ.ಎಸ್.ಗೆ 30ರಿಂದ 40ಲಕ್ಷ ರೂಪಾಯಿ ರಾಜ್ಯ ಸರ್ಕಾರದಿಂದ ಡ್ಯೂ ಇದೆ.

ಅವರು ವ್ಯವಹಾರ ಮಾಡುವುದಕ್ಕೆ ಆಗುತ್ತಿಲ್ಲವಾದ್ದರಿಂದ ಆ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದೆ. ಇನ್ನು ಕೇಂದ್ರದ ಸರ್ಕಾರದಿಂದ ಎಣ್ಣೆ ಕಳುಹಿಸುತ್ತಾರೆ ಎನ್ನುವ ಭರವಸೆಗೇ ನಾವು ಅಭಿನಂದನೆ ಮಾಡಿದರೆ ಸಾಕಾಗೋಲ್ಲ. ಇವತ್ತು ಡೀಸಲ್‌ನ ಬೆಲೆ 11-12-13 ರೂಪಾಯಿ ಲೀಟರ್‌ಗೆ ಆಗಿದೆ. ಮತ್ತೆ ಕ್ಯಾನ್‌ನಲ್ಲಿ ಕೊಡುವುದಿಲ್ಲ ಎಂದು ಹೇಳುತ್ತಾರೆ. ರೈತರು ಡೀಸಲ್‌ನ್ನು ಕ್ಯಾನ್‌ನಲ್ಲಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಇದರ ಬಗ್ಗೆ ಯಾವ ರೀತಿ ವಿತರಣೆ ಮಾಡುತ್ತೀರಿ. ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ಎಂದು ಹೇಳಿ. ತಾವು ಡೆಲ್ಲಿಗೆ ಟ್ರಿಪ್ ಮಾಡಿರುವುದಕ್ಕೆ ಸಂತೋಷ. ತಾವು ಹೋಗಿ ಬಂದಿರುವುದಕ್ಕೆ ಅಭಿನಂದಿಸೋಣ. ಆದರೆ ಈಗಿನ ವ್ಯವಸ್ಥೆ ಬಗ್ಗೆ ಏನೆಂದು ಹೇಳಿ ಸ್ವಾಮಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ : ಮಾನ್ಯ ಸಭಾಧ್ಯಕ್ಷಣೆಯವರೇ, ಮಾನ್ಯ ಪ್ರತಿಪಕ್ಷದ ಉಪನಾಯಕರು ಆವತ್ತೂ ಕೂಡಾ ಸರ್ಕಾರದ ಗಮನವನ್ನು ಸೆಳೆದಿದ್ದರು. ಮತ್ತು ದೆಹಲಿಗೆ ಹೋಗಿಬಂದಮೇಲೆ ಆದ ಕೆಲವು ಕೆಲಸಕಾರ್ಯಗಳ ಬಗ್ಗೆ ಹೇಳುವುದು ಬಿಟ್ಟು, ಆವೊತ್ತು ಏನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರು.

ಶ್ರೀ ಪಿ.ಜಿ. ಆರ್. ಸಿಂಧ್ಯ : ಹಾರ ಹಾಕಬೇಕೇ? ಡೆಲ್ಲಿಗೆ ಹೋಗಿ ಬಂದಿದ್ದೀರಿ. ಅದಕ್ಕೆ ಅಭಿನಂದಿಸೋಣ. ಇವತ್ತು ಡಿಸ್ಟ್ರಿಬ್ಯೂಷನ್ ಸರಿಯಾಗಿ ನಡೆಯುತ್ತಿಲ್ಲ. ಬೆಲೆ ಜಾಸ್ತಿಯಾಗಿದೆ. ಫುಡ್ ಅಂಡ್ ಸಿವಿಲ್ ಸಪ್ಲೈ ಡೈರೆಕ್ಟರ್‌ರಿಂದ ಸರ್ಕ್ಯುಲರ್ ವಾಪಸ್ಸು ತೆಗೆದುಕೊಳ್ಳಿ, ಸಬ್ಸಿಡಿ ಹಣ ರಿಲೀಸ್ ಮಾಡಿ ; ಪಾಪ, ಎಂಎಲ್‌ಎಗಳು ಆಳುತ್ತಿದ್ದಾರೆ ಎಂದರೆ, ನನಗೆ ಅಭಿನಂದಿಸಿಲ್ಲ ಎನ್ನುವಾದಾದರೆ, ಹಾರ ಹಾಕಬೇಕೇ? ಮೈಸೂರು ಮಲ್ಲಿಗೆ ಹಾರವನ್ನೇ ಹಾಕುತ್ತೇನೆ. ಆಯಿತೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ : ತಾವು ಹಾಗೆ ಹೇಳಿದರೂ ಸಹ ನನಗೇನೂ ಬೇಜಾರು ಆಗಲ್ಲ. ತಾವು ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದೀರಿ. ಹಂತಹಂತವಾಗಿ ಸಮಸ್ಯೆಗಳನ್ನು ಇತ್ಯರ್ಥ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಇಡೀ ರಾಷ್ಟ್ರದಲ್ಲೇ ನಮ್ಮ ರಾಜ್ಯಕ್ಕೆ 4 ಸಾವಿರ ಮೆಟ್ರಿಕ್ ಟನ್ ಡೀಸೆಲ್ ಕೊಟ್ಟಿರುವುದು ಸುಧಾರಣೆಗೆ ಕೈಗೊಂಡ ನಿರ್ಧಾರವಲ್ಲವೇ? ಆದರೂ ಇವತ್ತು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಆಹಾರ ಇಲಾಖೆಗೆ ಬರುವ ವಸ್ತುಗಳನ್ನು ವಿತರಣೆ ಮಾಡುವುದರಲ್ಲಿ ಮಂದಗತಿ ತೋರಿದ್ದರೆ ಅಥವಾ ಉದಾಸೀನರಾಗಿದ್ದರೆ ಅದನ್ನು ಖಂಡಿತಾ ನಾನು ಗಮನಿಸುತ್ತೇನೆ. ಅದನ್ನು ಆದಷ್ಟು ಮಟ್ಟಿಗೆ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, ಸಹಕಾರ ಸಂಘಗಳಿಗೆ ಸರ್ಕಾರದ ವತಿಯಿಂದ ಬಿಡುಗಡೆ ಆಗದೇ ಇರುವ ಹಣದ ಬಗ್ಗೆ ಹಣಕಾಸಿನ ಸಚಿವರೂ ಆಗಿರತಕ್ಕ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಮುಂದಿನ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಯಾವುದೇ ಬಾಕಿ ಇದ್ದರೂ ಸಹಕಾರ ಸಂಘಗಳು ನಡೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಅರ್ಥಮಾಡಿಕೊಂಡಿದ್ದೇವೆ.

ವಿರೋಧ ಪಕ್ಷದ ಉಪನಾಯಕರು ನನ್ನ ಮಿತ್ರರಾಗಿದ್ದು ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಲಹೆಗಳನ್ನು ಖಂಡಿತಾ ನಾವು..

ಶ್ರೀ ಪಿ.ಜಿ.ಆರ್. ಸಿಂಧ್ಯ : ದುಡ್ಡು ಎಷ್ಟು ದಿವಸದಲ್ಲಿ ರಿಲೀಸ್ ಮಾಡುತ್ತೀರೆಂದು ಹೇಳಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾಳೆಯೇ ಕೊಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನ್ನು 4 ತಿಂಗಳಲ್ಲಿ ಎಲ್ಲಾ ಸಬ್ಸಿಡಿ ಹಣವನ್ನು ರಿಲೀಸ್ ಮಾಡುತ್ತೇವೆಂದು ಈಗ ಹೇಳಿ. ಅಷ್ಟು ಹೇಳಿದರೆ ಸಾಕು.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಉಪನಾಯಕರು ಹೇಳಿದ ಹಾಗೆ ನಿಮ್ಮ ಡಿಸ್ಟ್ರಿಬ್ಯೂಷನ್ ವ್ಯವಸ್ಥೆಯಲ್ಲಿ ತಾವು ಬಿಗಿ ಹಿಡಿಯಬೇಕು. ಇದು ನಿಮಗೇ ಗೊತ್ತಿರುವುದಿಲ್ಲ, ಇವತ್ತು ವಿತರಣೆ ಜಿಲ್ಲಾಪರಿಷತ್ ಮುಖಾಂತರ ಮಾಡಬೇಕೋ, ಮತ್ತೊಂದಕ್ಕೆ ಕೊಡಬೇಕೋ ಎನ್ನುವ ಬಗ್ಗೆ ಗೊಂದಲ ಮಾಡಿಟ್ಟಿದ್ದೀರಿ. ನಮ್ಮ ಜಿಲ್ಲೆಯ ದಾಂಡೇಲಿಯಂತಹ ನಗರದಲ್ಲೂ ಸರಿಯಾದ ವಿತರಣೆಯಾಗುತ್ತಿಲ್ಲ, ಹಳ್ಳಿಯಲ್ಲೂ ವಿತರಣೆ ಆಗುತ್ತಿಲ್ಲ, ಸಹಕಾರ ಸಂಘಗಳಿಗೆ ಹಣ ಕೇವಲ 3 ಅಥವಾ 6 ತಿಂಗಳಿಂದ ಬಾಕಿ ಇಲ್ಲ, ಕಳೆದ ಒಂದೂವರೆ ವರ್ಷದಿಂದ ಬಾಕಿ ಉಳಿದಿದೆ. ಎಷ್ಟು ದಿವಸದಲ್ಲಿ ಕೊಡುತ್ತೀರಾ? ಇವತ್ತು ಹಳ್ಳಿಗಳಲ್ಲಿ ರಸ್ತೆ ಕೆಲಸಗಳೆಲ್ಲಾ ಬಂದ್ ಆಗಿದೆ. ನಿಮ್ಮಲ್ಲಿ ಹಣ ಇದೆ ಎಂದು ಹೇಳುತ್ತೀದ್ದೀರಿ. ಆದರೆ ಕೊಡುತ್ತಿಲ್ಲ; ಯಾವಾಗ ಕೊಡುತ್ತೀರೆಂಬುದನ್ನು ಹೇಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸರ್ಕಾರ ಕೊಡತಕ್ಕ ರೊಕ್ಕವನ್ನು ಕೊಡಬೇಕು. ಇವತ್ತು ಚಿಮಣಿ ಎಣ್ಣೆ ಲೀಟರ್‌ಗೆ 5-6 ರೂಪಾಯಿಯಾದರೆ ಬಡವರು ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ನಾನೂ ಸಹಿ ಹಾಕಿದ್ದೇನೆ. ನನಗೂ ಉತ್ತರ ಬಂದಿದ್ದು ನಾನೂ ಒಂದೆರಡು ವಿಚಾರ ಪ್ರಸ್ತಾಪ ಮಾಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಆಹಾರ ಸಚಿವರು ತಮ್ಮ ಕಳಕಳಿ ವ್ಯಕ್ತ ಮಾಡಿದ್ದಾರೆ. ಅವರಿಗೆ ಕೆಲವರು ಅಭಿನಂದನೆ ಸಲ್ಲಿಸಿದ್ದಾರೆ. ಅದಕ್ಕೆ ನಮ್ಮದು. ವಿರೋಧ ಏನೂ ಇಲ್ಲ. ಈಗ ನಾನು ಮಾತನಾಡಲು ಎದ್ದರೆ ಏಕೆ ಆ ಪಕ್ಷದ ಸದಸ್ಯರು ಗೊಂದಲ ಮಾಡುತ್ತಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ ; ಆದ್ದರಿಂದ ಮಾತನಾಡುತ್ತಿದ್ದೇನೆ.

ಮಾನ್ಯ ಆಹಾರ ಸಚಿವರಲ್ಲಿ ಒಂದು ಮನವಿಯನ್ನು ಏನು ಮಾಡುತ್ತೇನೆಂದರೆ, ಈಗ ತಾಳೆ ಎಣ್ಣೆಯನ್ನು ತಂದಿದ್ದೇವೆಂದು ಹೇಳಿದ್ದಾರೆ. ಡೀಸಲ್ ಪರಿಸ್ಥಿತಿ ಏನಾಗಿದೆ ಎನ್ನತಕ್ಕದನ್ನು ತಾವು ಸ್ವಲ್ಪ ಗುಪ್ತವಾಗಿ ಪೇಟೆಗಳಿಗೆ ಹೋಗಿ ಈ ಪೆಟ್ರೋಲ್ ಬಂಕ್‌ಗಳಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತೆರೆಮರೆಯಲ್ಲಿ ನೋಡಿ. ಸುಮಾರು ಒಂದು ಕಿಲೋಮೀಟರ್ ದೂರ ಲಾರಿಗಳು ಇತರೆ ವಾಹನಗಳು ನಿಂತಿರುತ್ತವೆ. ತಾವು ದಯಮಾಡಿ ನೋಡಬೇಕು. ಆದರಿಂದ ಏನಾಗಿದೆ ಅಂದರೆ, ಕಾಳಸಂತೆಯಲ್ಲಿ ಡೀಸಲ್ ವ್ಯಾಪಾರ ಜಾಸ್ತಿಯಾಗಿ ಡೀಸಲ್‌ನ ಪ್ರತಿ ಲೀಟರ್‌ನ ಬೆಲೆ ಜಾಸ್ತಿಯಾಗಿದೆ. ಕಳ್ಳ ಮಾರ್ಕೆಟ್‌ನ ಬೆಲೆ ಸಹ ಜಾಸ್ತ ಆಗಿದೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಒಂದು ಕಡೆ ಡೀಸಲ್‌ನ ಬೆಲೆ ಜಾಸ್ತಿಯಾಗಿದೆ. ಮತ್ತೊಂದು ಕಡೆ ಸೀಮೆಎಣ್ಣೆ ಬೆಲೆ ಜಾಸ್ತಿಯಾಗಿದೆ. ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನಲ್ಲಿ ಬೂಸ್ಟ್ ಹಿಡಿದಿರತಕ್ಕ ಅಕ್ಕಿಯನ್ನು ವಿತರಣೆ ಮಾಡುತ್ತಿದ್ದಾರೆ. ಅದನ್ನು ಪ್ರಯತ್ನಪಟ್ಟು ತಂದರೆ, ಅದನ್ನು ಈ ಸಭೆಗೆ ತರಬಾರದು ,ಸಭೆಯಲ್ಲಿ ತಂದು ತೋರಿಸಬೇಡಿಯೆಂದು ತಾವು ಹೇಳುತ್ತೀರಿ. ಅನೇಕ ಜನ

ಮಾನ್ಯಸದಸ್ಯರು ಹೇಳುತ್ತಾರೆ. ಬೂಸ್ಟ್ ಹಿಡಿದಿರತಕ್ಕ ಅಕ್ಕಿಯನ್ನು ನೂರಾರು ನ್ಯಾಯಬೆಲೆ ಅಂಗಡಿಗಳಲ್ಲಿ ಹಂಚುತ್ತಿದ್ದಾರೆ. ಕೊನೆಗೆ ಬೇಡಿ ತೆಗೆದುಕೊಳ್ಳೋಣವೆಂದರೆ ಹರಳೆಣ್ಣೆ ಕೂಡ ಸಿಗುತ್ತಿಲ್ಲ. ನಿಮ್ಮ ಕಷ್ಟ ತಡೆಯಲಾರದೆ ಕೊನೆಗೆ ಬೇಡಿ ತೆಗೆದುಕೊಳ್ಳೋಣವೆಂದರೆ ಅದಕ್ಕೆ ಹರಳೆಣ್ಣೆ ಬೇಕಲ್ಲ ಹರಳೆಣ್ಣೆ ತೆಗೆದುಕೊಂಡರೆ ಭೇದಿಯಾಗುತ್ತದೆ, ಅದನ್ನು ತೆಗೆದುಕೊಳ್ಳೋಣವೆಂದರೆ ಅದಕ್ಕೂ ಕಷ್ಟವಾಗಿದೆ,. ಡೀಸಲ್, ಸೀಮೆಎಣ್ಣೆ ಆಹಾರ ಪದಾರ್ಥಗಳ ವಿತರಣೆ ಸರಿಯಾಗಿ ಆಗುವ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಬೇಕು. ಬಹಳ ಚುರುಕಾಗಿ ಉತ್ತರ ಕೊಡುತ್ತೀರಿ. ಬಹಳ ಗಂಭೀರವಾಗಿ ಹೇಳುತ್ತಿದ್ದೀರಿ. ಅದರಲ್ಲಿ ನಮ್ಮದು ತಕರಾರು ಇಲ್ಲ. ನೀವು ಯಾವ ಇಲಾಕೆ ತೆಗೆದುಕೊಂಡರೂ ಉತ್ತರ ಕೊಡಲು ಸಿದ್ಧರಾಗಿರುತ್ತೀರಿ ಅದು ತಮ್ಮ ವ್ಯಕ್ತಿತ್ವವೆಂದು ನನಗೆ ಅನಿಸುತ್ತದೆ. ತಾವು ಈ ದಿಶೆಯಲ್ಲಿ ಸ್ವಲ್ಪ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷೀಣೀಯವರೆ, ಮೊನ್ನೆ ದಿವಸ ವಿಧಾನಸಭೆಯಲ್ಲಿ ಆಹಾರ ಮಂತ್ರಿಗಳು ಈ ವಿಚಾರದಲ್ಲಿ ನಾನು ದೆಹಲಿಗೆ ಹೋಗಿ ಈ ರೀತಿಯಲ್ಲಿ ತಾಳೆಎಣ್ಣೆ ಇನ್ನಿತರ ಎಲ್ಲ ಅಗತ್ಯ ವಸ್ತುಗಳನ್ನು ತೆಗೆದುಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದಾಗ ಕೆಲವರು ನಗೆಯಾಡಿದರು. ತಾವು ಹೋಗುತ್ತೇನೆ ತರುತ್ತೇನೆಂದು ಹೇಳಿ ಆವೊಂದು ಸಾಧನೆಯನ್ನು ಮಾಡಿ ತಂದಿದ್ದೀರಿ. ನಿಮಗೆ ಜನರ ಬಗ್ಗೆ ಕಳಕಳಿಯಿತ್ತು. ಜನರಿಗೆ ಉಪಕಾರ ಮಾಡಬೇಕೆನ್ನುವ ಆಸೆಯಿಂದ ತಾವು ದೆಹಲಿಗೆ ಹೋಗಿ ಮಾಳವೀಯರನ್ನು ಕಂಡು, ವೀರೇಂದ್ರಸಿಂಗ್‌ರವರನ್ನು ಕಂಡು ಅದೇರೀತಿಯಲ್ಲಿ ತಾಳೆಎಣ್ಣೆ ಗೋಧಿ ಇನ್ನಿತರ ದಿನಸಿಗಳನ್ನು ತರುವಂತಹ ವ್ಯವಸ್ಥೆ ಮಾಡಿರುವುದು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೂಡ ಮಾಡಿದ್ದೀರಿ. ಮಾನ್ಯ ನರಸಿಂಹಮೂರ್ತಿಯವರು ಬಹಳ ಪಣತೊಟ್ಟು ದೆಹಲಿಗೆ ಹೋಗಿ ಅಷ್ಟೊಂದು ಕೆಲಸವನ್ನು ಮಾಡಿರುವುದಕ್ಕೆ ನಿಜವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕು. ಇಷ್ಟೊಂದು ತೀವ್ರವಾಗಿ ಮೂರ್ನಾಲ್ಕು ದಿವಸಗಳೊಳಗೆ ದೆಹಲಿಗೆ ಹೋಗಿ ಈ ಕೆಲಸ ಮಾಡಿದ್ದಾರೆ. ಇಲ್ಲಿ ದೆಹಲಿಗೆ ಹೋಗುತ್ತೇನೆಂದು ಹೇಳಿದಾಗ ಕೆಲವರು ನಗೆಯಾಡಿದರು. ಅವರ ನಗೆ ಹುಸಿಯಾಯಿತು. ಅವರು ಹೋದ ಕೆಲಸವನ್ನು ಜರುಗಿಸಿರುವುದು ನಮಗೆ ಸಂತೋಷವಾಗಿದೆ. ಅದೇರೀತಿಯಲ್ಲಿ ಆಹಾರ ಪದಾರ್ಥಗಳು ಸರಿಯಾದ ರೀತಿಯಲ್ಲಿ ಹಂಚಿಕೆಯಾಗಬೇಕೆಂದು ತಾವು ಹೇಳಿದ್ದಾರಿ. ಎಲ್ಲರಿಗೂ ಸರಿಯಾಗಿ ವಿತರಣೆಯಾಗುವಂತೆ ತಾವು ಮಾಡಬೇಕೆಂದು ಹೇಳಿ, ಈ ಕೆಲಸ ಮಾಡಿದ್ದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷೀಣೀಯವರೆ, ಆಹಾರ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ, ಬಹಳ ಸಂತೋಷ. ಈಗ ನಮ್ಮ ಜಿಲ್ಲೆಯಲ್ಲಿ 1 ಕೋಟಿ 40 ಲಕ್ಷ ರೂಪಾಯಿ ಸಬ್ಸಿಡಿ ನಮಗೆ ಸರ್ಕಾರದಿಂದ ಬರಬೇಕು. ಈ ಹಣ ಅವರ ಸ್ವಂತದ್ದು ಅಲ್ಲ, ಅವರು ಜಿಲ್ಲಾ ಬ್ಯಾಂಕುಗಳಿಂದ ಸಾಲ ಮಾಡಿದ್ದಾರೆ. ಜಿಲ್ಲಾಬ್ಯಾಂಕಿನವರಿಗೆ 14 ಪರ್ಸೆಂಟ್ 15 ಪರ್ಸೆಂಟ್ ಬಡ್ಡಿ ಕಟ್ಟಬೇಕು. ಮೊನ್ನೆತಾನೇ ಬಂದು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಒಂದೊಂದು ತಾಲ್ಲೂಕೂ ಸೊಸೈಟಿಗಳಿಗೆ ತಿಂಗಳಿಗೆ 20 ಸಾವಿರ ರೂಪಾಯಿ ಲಾಸ್ ಆಗುತ್ತಿದೆ. ಫರ್ದರ್ ಮೋಟಾ ಕೊಟ್ಟರೆ, ಅದನ್ನು ಕಂಡುಕೊಳ್ಳುವುದಕ್ಕೆ ಅವರಿಗೆ ಶಕ್ತಿಯಿಲ್ಲ. ನನಗೆ ಸಿಕ್ಕಿರುವ ಇನ್‌ಫರ್ಮೇಶನ್ ಪ್ರಕಾರ ಇಡೀ ರಾಜ್ಯದಲ್ಲಿ 40 ಕೋಟಿ ರೂಪಾಯಿವರೆಗೆ ಸಬ್ಸಿಡಿ ಕೊಡಬೇಕಾಗುತ್ತದೆ.

ಅದನ್ನು ಯಾವತ್ತು ಕೊಡುತ್ತೀರಿ? ಕೊಡದಿದ್ದರೆ ಅವರ ಗತಿಯೇನು? ಕೆಲವರು ತಮ್ಮ ಕೈಯಲ್ಲಿ ಆಹಾರ ಧಾನ್ಯಸಾಗಿಸಲು ಆಗುವುದಿಲ್ಲವೆಂದರೆ ಬಿಟ್ಟುಬಿಡಿಯೆಂದು ಹೇಳುತ್ತಾರೆ. ಬಹಳ ಸುಲಭವಾಗಿ ಪ್ರವೇಟ್ ಏಜೆನ್ಸಿಯವರಿಗೆ ಕೊಡುವುದಕ್ಕೆ ನಡೆಸಿರುವ ಸನ್ನಾಹ ಇದು. ಯಾವಾಗ ಸಹಕಾರಸಂಘಗಳು ಲಿಫ್ಟ್ ಮಾಡುವುದಕ್ಕಾಗುವುದಿಲ್ಲ, ಆಗ ಏನು ಮಾಡುತ್ತೀರಿ ಅಂದರೆ ಪ್ರೈವೇಟ್‌ನವರಿಗೆ ಏಜೆನ್ಸಿ ಕೊಡುತ್ತೀರಿ. ಅದು ಎಷ್ಟರಮಟ್ಟಿಗೆ ಡಿಸ್ಟ್ರಿಬ್ಯೂಷನ್ ಆಗುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಿ. ಬೆಂಗಳೂರು ಜಿಲ್ಲೆಯಲ್ಲಿ ಮತ್ತು ಹೆಡ್ ಕ್ವಾರ್ಟ್ರರ್‌ಗಳಲ್ಲಿ ರೈತರು ಟ್ರಾಕ್ಟರ್‌ಗಳಲ್ಲಿ ಬಹಳಷ್ಟು ತರಕಾರಿಗಳನ್ನು ತುಂಬಿಕೊಂಡು ಬರುತ್ತಾರೆ.

ತರಕಾರಿಯನ್ನು ಕುಯ್ದು ತುಂಬಿಕೊಂಡು ಬರುವುದಕ್ಕೆ ಡೀಸೆಲ್‌ಗೆಂದು 2-3 ದಿವಸ ಕಾಯಬೇಕಾಗುತ್ತದೆ. ಹೀಗಾದರೆ ತರಕಾರಿ ಮಾರುಕಟ್ಟೆಗೆ ಬರುವುದು ಹೇಗೆ? ಇದರಿಂದ ತರಕಾರಿಯ ಬೆಲೆ ಜಾಸ್ತಿಯಾಗುತ್ತದೆ. ಈರುಳ್ಳಿ 7ರೂಪಾಯಿ ಟಮಾಟೋ 10 ರೂಪಾಯಿ ಆಲೂಗಡ್ಡೆ 8 ರೂಪಾಯಿಯಾಗಿದೆ. ಈ ಬಗ್ಗೆ ನಾವು ದಿನಪತ್ರಿಕೆಯಲ್ಲಿ ಕೂಡ ಓದಿದ್ದೇವೆ. ಇದರಲ್ಲಿ ತಪ್ಪು ಯಾರದು ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಕಡೇಪಕ್ಷ ತಾವು ತಹಶೀಲ್‌ದಾರರಿಗೆ ಸೂಚನೆಯನ್ನು ಕೊಟ್ಟು ಇವರಿಗೆ ಪ್ರತಿ ತಿಂಗಳಿಗೆ 200-300 ಲೀಟರ್ ಡೀಸಲ್ ದೊರೆಯುವಂತೆ ಇಲ್ಲವೇ ವಾರಕ್ಕೆ ಅವರಿಗೆ ಎಷ್ಟು ಬೇಕಾಗುತ್ತದೆ, ಎಷ್ಟು ಅವಶ್ಯಕತೆ ಇದೆ ರೈತರಿಗೆ ಅಷ್ಟು ಡೀಸೆಲ್ ಅನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಪರ್ಮಿಟ್ ಅನ್ನು ಕೊಡಬೇಕು. ಪರ್ಮಿಟ್ ಕೊಡುವ ವ್ಯವಸ್ಥೆ ಮಾಡದಿದ್ದರೆ ಬಹುಶಃ ಕನ್ಸ್ಯೂಮರ್ಸ್ ಸಫರ್ ಮಾಡಬೇಕಾಗುತ್ತದೆ. ಮತ್ತು ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಅಲ್ಲದೆ ರೈತ ಕೂಡ ಹಾಳಾಗುತ್ತಾನೆ. 100ಕ್ಕೆ 95 ರಷ್ಟು ರೈತರು ಸಾಲ ಮಾಡಿ ಟ್ರಾಕ್ಟರ್‌ನ್ನು ತೆಗೆದುಕೊಂಡಿರುತ್ತಾರೆ. ಸ್ವಂತ ದುಡ್ಡನ್ನು ಹಾಕಿ ಯಾರೂ ತೆಗೆದುಕೊಳ್ಳುವುದಿಲ್ಲ. ಅಲ್ಲಿ ಬಡ್ಡಿ ಕಟ್ಟಬೇಕಾಗುತ್ತದೆ, ಡ್ರೈವರುಗಳಿಗೆ ಸಂಬಳ ಕೊಡಬೇಕಾಗುತ್ತದೆ, ಟ್ಯಾಕ್ಸ್ ಕಟ್ಟಬೇಕಾಗುತ್ತದೆ. ಆದುದರಿಂದ ದಯಮಾಡಿ ಇವರು ತರಕಾರಿಯನ್ನು ಸಾಗಿಸಬೇಕಾದರೆ ದಿನಗಟ್ಟಲೆ ಕಾಯುವಂತಹ ಈ ಅವ್ಯವಸ್ಥೆಯನ್ನು ತಪ್ಪಿಸಿ ವ್ಯವಸ್ಥೆಯನ್ನು ಮಾಡುತ್ತೀರಾ? ಮಾಡುವುದಾದರೆ ಎಷ್ಟು ಬೇಗ ಪರ್ಮಿಟ್‌ಗಳನ್ನು ಕೊಡಿಸುತ್ತೀರಿ ಎಂದು ಹೇಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ವಿಚಾರದಲ್ಲಿ ನಾನು ಮತ್ತು ಮಾನ್ಯ ಸಿಂಧ್ಯಾರವರ ಹಾಗೂ ಶ್ರೀ ವಾಟಾಳ್ ನಾಗರಾಜ್‌ರವರು ಸರಕಾರದ ಗಮನವನ್ನು 21ನೇ ತಾರೀಖು ಸೆಳೆದಿದ್ದವು. ಆ ಸಂದರ್ಭದಲ್ಲಿ ಕಾಳಸಂತೆಯಲ್ಲಿ ಡೀಸೆಲ್ ಮಾರಾಟವಾಗುತ್ತಿರುವುದು ಎಲ್ಲರಿಗೂ ಗೊತ್ತಿತ್ತು. ಬೆಂಗಳೂರು ನಗರದಲ್ಲಿ ಎಲ್ಲಿ ನೋಡಿದರೂ ಲಾರಿಗಳ ಕ್ಯೂ ಅನ್ನು ನೋಡುತ್ತಿದ್ದೇವೆ. ಇದು ಬಹಳ ಪ್ರಾಮುಖ್ಯವಾದ ವಿಚಾರವೆಂದು ಇಲ್ಲಿ ಪ್ರಸ್ತಾಪಮಾಡಿದ ಮೇಲೆ, ಇದರ ಬಗ್ಗೆ ಕೇಂದ್ರದ ಜೊತೆಯಲ್ಲಿ ವ್ಯವಹಾರ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದರು. ಅದರಂತೆ, ಅವರು ಮಾಡಿದ್ದಾರೆ. ಈಗ ಕ್ಯೂ ನೋಡಿದರೆ ಬಹಳಷ್ಟು ಕಡಿಮೆಯಾಗಿದೆ. ಅದಕ್ಕಾಗಿ ನಿಮ್ಮನ್ನು ನಾನು ಅಭಿನಂದಿಸುತ್ತಿದ್ದೇನೆ. ಇದರ ಜೊತೆಗೆ ಮಾನ್ಯ ಸಿಂಧ್ಯರವರು ಹೇಳಿದ ಪ್ರಕಾರ ಹಳ್ಳಿಗಳಲ್ಲಿ ಡೀಸೇಲ್ ಪಂಪುಸೆಟ್ಟುಗಳು ಹಾಗೂ ಟ್ರ್ಯಾಕ್ಟರುಗಳನ್ನು ಇಟ್ಟುಕೊಂಡಿರತಕ್ಕಂತಹವರು ಯಾರಿದ್ದಾರೆ, ಅವರಿಗೆ ಇವತ್ತಿಗೂ ಕೂಡ ವ್ಯವಸ್ಥಿತವಾಗಿ ಡೀಸೇಲ್ ಒದಗುತ್ತಿಲ್ಲ. ಇವತ್ತು ಎಲ್ಲಾ ಪೆಟ್ರೋಲ್ ಬ್ಯಾಂಕ್‌ಗಳಲ್ಲಿ ಕ್ಯಾನ್‌ಗಳಿಗೆ ನಾವು ಡೀಸೇಲ್ ಅನ್ನು ಸಪ್ಲೈ ಮಾಡುವುದಿಲ್ಲವೆಂದು ಬೋರ್ಡ್‌ಗಳನ್ನು ಹಾಕಿದ್ದಾರೆ. ಕ್ಯಾನ್‌ಗಳಿಗೆ ಡೀಸೆಲ್ ಅನ್ನು ಕೊಡದೇ ಹೋದರೆ ಡೀಸೇಲ್ ಪಂಪ್‌ಸೆಟ್‌ಗಳನ್ನು

ನಡೆಸುವುದಕ್ಕಾಗುವುದಿಲ್ಲ. ಟ್ರ್ಯಾಕ್ಟರುಗಳಿಗೆ ಡೀಸೆಲ್ ಅನ್ನು ಒದಗಿಸುತ್ತಿಲ್ಲ. ಇದರ ಬಗ್ಗೆ ಸಹ ತಾವು ಕ್ರಮ ತೆಗೆದುಕೊಳ್ಳಬೇಕು. ಇನ್ನು ಟಿ.ಎ.ಪಿ.ಸಿ.ಎಂ.ಎಸ್ ವಿಚಾರದಲ್ಲಿ ಮಾನ್ಯ ಜಾಲಪ್ಪನವರು ಹೇಳಿದ ರೀತಿ ಸರಿಯಾಗಿದೆ. ಮಾನ್ಯ ನರಸಿಂಹಮೂರ್ತಿಯವರು 20 ಅಂಶಗಳ ಕಾರ್ಯಕ್ರಮದ ಬಗ್ಗೆ ಮಂಡ್ಯದಲ್ಲಿ ಒಂದು ಮೀಟಿಂಗ್ ಮಾಡಿದರು. ಆಗ ಅಲ್ಲಿ ನಮ್ಮ ಜಿಲ್ಲೆಯಲ್ಲಿ ಆಹಾರ ವಿತರಣೆಸರಿಯಾಗಿ ಆಗುತ್ತಿಲ್ಲದಿರುವುದಕ್ಕೆ ಟಿ.ಎ.ಪಿ.ಸಿ.ಎಂ.ಎಸ್.ಗಳು ಆರ್ಥಿಕವಾಗಿ ಚೆನ್ನಾಗಿಲ್ಲವೆಂದು ತಮಗೆ ಅರ್ಥವಾಯಿತು. ಆಗ ತಾವು ಆದೇಶ ಕೊಟ್ಟು ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಬೆಂಗಳೂರಿಗೆ ಕರೆತಂದು ಸ್ವಲ್ಪ ಹಣವನ್ನು ಬಿಡುಗಡೆ ಮಾಡಿಸಿದ್ದೀರಿ. ಇವತ್ತು ಇಡೀ ರಾಜ್ಯದಲ್ಲಿರತಕ್ಕಂತಹ ಟಿ.ಎ.ಪಿ.ಸಿ.ಎಂ.ಎಸ್.ಗಳು ಏನು ಇವೆ ಅವುಗಳಿಗೆ ಸರಕಾರದಿಂದ ಸಿಗಬೇಕಾದಂತಹ ಹಣ ಸಿಗದೆ ಅವುಗಳು ನಿಶ್ಯಕ್ತವಾಗಿದೆ. ಇದರ ಬಗ್ಗೆ ತಾವು ದಯಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಡೀಸೆಲ್ ಅನ್ನು ಒದಗಿಸುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಿ. ಇನ್ನೂ ಸ್ವಲ್ಪ ಕಾಳಸಂತೆ ನಡೆಯುತಲ್ಲಿದೆ. ತಮ್ಮ ಅಧಿಕಾರಿಗಳಿಗೆ ಹೇಳಿ ಇದರ ಬಗ್ಗೆ ಸಹ ಬಿಗಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಡೀಸೆಲ್ ಅನ್ನು ಕ್ಯಾನ್‌ನಲ್ಲಿ ಕೊಂಡೊಯ್ಯುವ ವ್ಯವಸ್ಥೆ ಮಾಡಬೇಕು.

ಉಪಾಧ್ಯಕ್ಷರು : ಮಂತ್ರಿಗಳು ಏನಾದರೂ ಹೇಳುವುದಿದ್ದರೆ ಹೇಳಬಹುದು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ರಾಜ್ಯದಲ್ಲಿನ ಆಹಾರ ವಸ್ತುಗಳು ಹಾಗೂ ಖಾದ್ಯ ತೈಲಗಳು ಪೆಟ್ರೋಲಿಯಂ ಪ್ರಾಡಕಟ್ಸ್ ಸಮಸ್ಯೆ ಬಗ್ಗೆ ಬಂದಂಥ ಅನೇಕ ಉಪಯುಕ್ತವಾದ ಅಕ್ಕೋಶದ ನುಡಿಗಳನ್ನು ಗಮನಿಸಿದ್ದೇನೆ. ನಾನು ಈಗಾಗಲೇ ಹೇಳಿಕೆಯನ್ನು ಮಾಡಿದ್ದೇನೆ. ಈ ಬಗ್ಗೆ ದೆಹಲಿಗೆ ಹೋಗಿ ಬಂದ ಪರಿಣಾಮಗಳನ್ನು ಕೂಡ ಹೇಳಿದ್ದೇನೆ. ಆ ಹೇಳಿಕೆಯ ನಂತರ ಸದನದ ನಿಯಮಗಳಿಗನುಸಾರವಾಗಿ ಇದು ಚರ್ಚೆ ಆಗಬಾರದು. ಆದರೂ ಹೇಳಿಕೆನಂತರ ಮಾನ್ಯ ವಾಟಾಳ್‌ನಾಗರಾಜ್ ರವರು ಜಾಲಪ್ಪನವರು, ಮತ್ತು ಶಿವರಾಮೇಗೌಡರು, ಇದಿನಬ್ಬ ಮತ್ತಿತರರು ಬಹಳ ಒಳ್ಳೆಯ ಸಲಹೆಗಳನ್ನು ನನಗೆ ನೀಡಿದ್ದಾರೆ. ಹಾಗೂ ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದಾರೆ. ನಾನು ಇಷ್ಟು ಭರವಸೆಯನ್ನು ಇಲ್ಲಿ ಕೊಡಬಯಸುತ್ತೇನೆ. ನಾನು ಇಲ್ಲಿಗೆ ಆಗಿಂದಾಗ್ಗೆ ಬರಬೇಕಾಗುತ್ತದೆ ತಮಗೆ ಉತ್ತರ ಹೇಳಬೇಕಾಗುತ್ತದೆ. ನಾನು ಹೇಳಿದಂತಹ ಮಾತಿನಲ್ಲಿ ಕೂಡ ನಿಜಾಂಶ ಇರಬೇಕಾಗುತ್ತದೆ. ಮಾನ್ಯ ಜಾಲಪ್ಪನವರೂ ಕೂಡ ಸಹಕಾರಿ ಸಚಿವರಾಗಿ ಕೆಲಸಮಾಡಿದ್ದಾರೆ. ಅವರು ಸಹಕಾರ ಸಂಘಗಳಿಗೆ ನೀಡಬೇಕಾದ ಬಾಕಿಯನ್ನು ಇತ್ಯರ್ಥ ಮಾಡಬೇಕೆಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಗಮನ ಹರಿಸುತ್ತೇನೆ.

ಈ ಇಲಾಖೆ ನನ್ನ ಕೈಗೆ ಬಂದು 38 ದಿವಸ ಆಯಿತು. ಈ 38 ದಿವಸಗಳಿಂದೀಚೆಗೆ ಈ ಇಲಾಖೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಮಾಡಿದ್ದೇನೆ ಇದರ ಜೊತೆಗೆ ಮಾನ್ಯ ಸದಸ್ಯರುಗಳಿಂದ ಬಂದಿರತಕ್ಕಂಥ ಉಪಯುಕ್ತವಾದ ಸಲಹೆಗಳನ್ನು ಕೂಡ ಗಮನಿಸಿದ್ದೇನೆ. ಎಲ್ಲವನ್ನೂ ಸುಧಾರಣೆ ಮಾಡುತ್ತೇನೆ. ಎಂದು ಭರವಸೆಯನ್ನು ಕೊಡದೇ ಇದ್ದರೂ ಕೂಡ ನಾನು ನನ್ನ ಅಧಿಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಇಲಾಖೆಯಲ್ಲಿ ಆದಷ್ಟೂ ಮಟ್ಟಿಗೆ ನಿಮ್ಮ ನಿರೀಕ್ಷೆಗೆ ಬರುವಂಥ ರೀತಿಯಲ್ಲಿ ವರ್ತನೆ ಮಾಡುತ್ತೇನೆ, ನನ್ನ ಕೆಲಸ ಮಾಡುತ್ತೇನೆ. ನನ್ನ ಈ ಕೆಲಸ ಕಾರ್ಯಗಳಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ರೈತರಿಗೆ ಡೀಸಲ್ ಪರ್ಮಿಟ್ ಕೊಡುವ ಬಗ್ಗೆ ಏನು ವ್ಯವಸ್ಥೆ ಹೇಳುತ್ತೀರಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ರೈತರು ಉಪಯೋಗಿಸುವಂಥ ಪಂಪುಸೆಟ್ಟು, ಟ್ರಾಕ್ಟರ್ ಇರತಕ್ಕಂಥವರಿಗೆ, ಮತ್ತು ಇತರೇ ವಿಶೇಷವಾದ ಉದ್ಯಮಗಳಿಗೆ ಆದ್ಯತೆ ಮೇರೆಗೆ ಪೂರ್ಣವಾಗಿ ಕೊಡಲಾಗದಿದ್ದರೂ, ಬರುವಂತಹ ಸರಬರಾಜಿನಲ್ಲಿ ಸರಿಯಾಗಿ ವಿತರಣೆ ಮಾಡುವಂಥ ಜವಾಬ್ದಾರಿಯನ್ನು ನಾವು ವಹಿಸುತ್ತೇವೆ ಮತ್ತು ಈ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಬೈರೇಗೌಡರೇ, ನೀವು ಈ ತಿದ್ದುಪಡಿ ಮಸೂದೆ ಬಗ್ಗೆ ಮಾತನಾಡಿ.

ಶ್ರೀ ಸಿ.ಬೈರೇಗೌಡ : ನಾನು ನಾಳೆ ಮಾತನಾಡುತ್ತೇನೆ. ಇಂದು ನಾನು ತಯಾರಾಗಿ ಬಂದಿಲ್ಲ.

ಉಪಾಧ್ಯಕ್ಷರು : ಶ್ರೀ ನಂಜುಂಡಸ್ವಾಮಿಯವರೇ, ನೀವು ಮಾತನಾಡುತ್ತೀರಾ?

ಪ್ರೊ:ಎಂ.ಡಿ. ನಂಜುಂಡಸ್ವಾಮಿ : ನಾನು ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಏಕಾಂತಯ್ಯನವರು...

ಶ್ರೀ ಎಚ್. ಏಕಾಂತಯ್ಯ : ಇವತ್ತು ನಾನು ಮಾತನಾಡುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ : ಒಂದು ಸಲ ತಾವು ಕರೆದ ಮೇಲೆ ಅವರು ಮಾತನಾಡದಿದ್ದರೆ, ನಾಳೆ ಮತ್ತೆ ಹೇಗೆ ಅವಕಾಶ ಸಿಗುತ್ತದೆ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನ್ನ ಆರೋಗ್ಯ ಸರಿಯಿಲ್ಲವಾದ ಕಾರಣ ನಾನು ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಆಗಬಹುದು ಶ್ರೀ ಬೈರೇಗೌಡರೇ, ಪಟ್ಟಿಯಲ್ಲಿ ನಾಲ್ಕನೇ ಹೆಸರು ನಿಮ್ಮದು ಇದೆ. ನೀವು ಈಗ ಪ್ರಾರಂಭಮಾಡಿ ನಾಳೆ ಬೇಕಾದರೆ ಮುಂದುವರೆಸಬಹುದು.

ಶ್ರೀ ಸಿ. ಬೈರೇಗೌಡ (ಮೇಮಗಲ್) : ಮಾನ್ಯ ಉಪಾಧ್ಯಕ್ಷಣೆಯವರೇ, ಈ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಹಿಂದೆ ಯಾವ ಸಂದರ್ಭದಲ್ಲೂ ಇಲ್ಲದಂಥ ಬಹುಮತವನ್ನು ಕಳೆದ ಒಂದು ವರ್ಷದ ಹಿಂದೆ ನಡೆದ ಚುನಾವಣೆಯಲ್ಲಿ ಕೊಟ್ಟಿದ್ದಾರೆ. ಈ ವಿಧಾನಸಭೆಯ ಚರಿತ್ರೆಯಲ್ಲಿ ಅಥವಾ ಕರ್ನಾಟಕ ರಾಜ್ಯದಲ್ಲಿ ಆಡಳಿತ ಪಕ್ಷದ ಚರಿತ್ರೆಯಲ್ಲೇ ಇಷ್ಟೊಂದು ಹೆಚ್ಚಿನ ಬಹುಮತ ಪಡೆದ ಸರ್ಕಾರ ಹಿಂದೆ ಯಾರುದೂ ಕೂಡ ಇರಲಿಲ್ಲ. ಇದು ಈ ಸದನದಲ್ಲಿ ಆಡಳಿತ ಪಕ್ಷ ಎಲ್ಲಿಯವರೆಗೆ ಬಂದಿದೆ ಎಂದರೆ, ನಾನು ಕುಳಿತುಕೊಳ್ಳುವ ಜಾಗದ ಪಕ್ಕದವರೆಗೂ ಕೂಡ ಬಂದಿದೆ. ನನ್ನ ಪಕ್ಕದಲ್ಲಿ ಕುಳಿತುಕೊಳ್ಳುವವರು ಆಡಳಿತ ಪಕ್ಷದ ಸದಸ್ಯರು. ಈ ಕಡೆ ಎಲ್ಲ ಅವರು ತುಂಬಿ ನಮ್ಮ ಕಡೆಗೆ ಕೋಡಿ ಹರಿಯುತ್ತಿದೆ. ಇದು ಜನತೆಯ ತೀರ್ಪು. ಜನ ಏನು ತೀರ್ಪನ್ನು ಕೊಟ್ಟಿದ್ದಾರೆ, ಅದು ಪ್ರಶ್ನಾತೀತವಾದುದು. ಇದನ್ನು ಪಾಲನೆ ಮಾಡುವುದು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕವರೆಲ್ಲರ ಕರ್ತವ್ಯವೂ ಹೌದು, ಸಂತೋಷ. ಅದಕ್ಕೆ ನಮ್ಮದೇನೂ ಕೂಡ ಅಭ್ಯಂತರ ಇಲ್ಲ. ಆದರೆ ಇವತ್ತು ಆಡಳಿತ ಪಕ್ಷಕ್ಕೆ ಇಷ್ಟೊಂದು ಬಹುಮತ ಕೊಡತಕ್ಕಂಥ ಪರಿಸ್ಥಿತಿಯಲ್ಲಿ, ಬಹುಮತವನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಆಡಳಿತವನ್ನು ನಡೆಸತಕ್ಕಂಥ ಪಕ್ಷದ ಜವಾಬ್ದಾರಿ,

ಹೊಣೆ ಮತ್ತು ಅವರ ಗುರಿ ಬಹಳ ಸ್ಪಷ್ಟವಾಗಿರಬೇಕಾದದ್ದು ಅತಿ ಅವಶ್ಯಕ. ಆದರೆ ಇವತ್ತು ನಮ್ಮ ಮುಂದಿಟ್ಟಿರತಕ್ಕಂಥ ಈ ಪಂಚಾಯತ್ ರಾಜ್ ಮಸೂದೆಯಲ್ಲಿ ಅದನ್ನು ಕಾಣುತ್ತಿಲ್ಲ. ಈ ಮಸೂದೆ ಬಗ್ಗೆ ಇಲ್ಲಿ ಹಿಂದೆ ಚರ್ಚೆಯಾಗಿ ನಂತರ ಅದು ಕಾನೂನಾಗಿ ಜಾರಿಗೆ ಬಂದ ಮೇಲೆ ನಾಲ್ಕು ವರ್ಷಗಳು ಕೂಡ ಪೂರ್ತಿಯಾಗಿ ಮುಗಿದಿಲ್ಲ.

ಇವತ್ತು, ಇವುಗಳ ಅವಧಿ ಇರುವುದು ಐದು ವರ್ಷ. ಆದರೆ ಇನ್ನೂ ನಾಲ್ಕು ವರ್ಷ ಪೂರ್ತಿಯಾಗಿ ಮುಗಿದಿಲ್ಲ. ಆಗಲೇ ಸಮಗ್ರವಾದ ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆ. ಬಹುಮತ ಇರತಕ್ಕಂಥ ಪಕ್ಷ, ಬಹುಮತ ಇರತಕ್ಕ ಸರ್ಕಾರ ತಿದ್ದುಪಡಿ ತರಬೇಕಾಗುತ್ತದೆ. ಅವರ ನೀತಿ ನಿರ್ದೇಶನಗಳನ್ನು ಜಾರಿಗೆ ಕೊಡಬೇಕಾಗುತ್ತದೆ, ಇದು ಅವರ ಕಾರ್ಯವೂ ಹೌದು. ಇದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಇದು ಪ್ರಜಾಪ್ರಭುತ್ವದ ನೀತಿ, ಧರ್ಮ, ತಿದ್ದುಪಡಿ ತರಬೇಕಾಗಿರುವುದು ಅವರ ಕರ್ತವ್ಯ. ಅವರು ಯೋಚನೆ ಮಾಡಬೇಕಾಗಿರತಕ್ಕ ದಿಕ್ಕಿನಲ್ಲಿ, ಕಾನೂನು ಬದಲಾವಣೆ ಮಾಡುವುದಕ್ಕೆ, ರಾಜ್ಯಾಂಗದತ್ತವಾದ ಅಧಿಕಾರ ಅವರಿಗೆ ಇದೆ. ಆದರೆ ಈ ರೀತಿ ಮಾಡತಕ್ಕ ಸಂದರ್ಭದಲ್ಲಿ, ಕಾನೂನನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ, ಇದರ ಆಗುಹೋಗುಗಳನ್ನು ತೀವ್ರವಾಗಿ ಆಲೋಚನೆ ಮಾಡಬೇಕಾಗಿರುವುದು ಮತ್ತು ಇದನ್ನು ಎಲ್ಲಾ ರೀತಿಯ ಪರೀಕ್ಷೆಗೆ ಒಳಪಡಿಸಬೇಕಾಗಿರುವುದು ಅವರ ಕರ್ತವ್ಯ. ಇದು ಅವರ ತಿದ್ದುಪಡಿಯಲ್ಲಿ ಎದ್ದು ಕಾಣುತ್ತಾ ಇಲ್ಲ. ನಾನು ಆಗಲೇ ಹೇಳಿದ ಹಾಗೆ, ಹೊಸದಾಗಿ ಬಂದ ಈ ಕಾನೂನಿಗೆ ಇನ್ನೂ 4 ವರ್ಷಗಳು ಪೂರ್ತಿಯಾಗಿ ಮುಗಿದಿಲ್ಲ. ಇಂತಹ ಸಂದರ್ಭದಲ್ಲಿ ಈ ಕಾನೂನಿಗೆ ಅನೇಕ ತಿದ್ದುಪಡಿಗಳನ್ನು ತಂದಿದ್ದಾರೆ. ಮತ್ತೆ ಈಗ ಇರತಕ್ಕ ಕಾನೂನಿನಲ್ಲಿ ಎಲ್ಲವೂ ಸಮರ್ಪಕವಾಗಿದೆ, ಎಲ್ಲವೂ ಸರಿಯಾಗಿದೆ, ಪ್ರಶ್ನಾತೀತವಾಗಿದೆ, ಸರ್ವಾಂಗಸುಂದರವಾಗಿದೆ ಎಂಬ ಭ್ರಮೆ, ಭ್ರಾಂತುನನಗಿಲ್ಲ. ಎಲ್ಲಿ ಲೋಪದೋಷಗಳು ಇವೆ, ಈ ಲೋಪದೋಷಗಳನ್ನು ಸರಿಪಡಿಸಬೇಕಾಗಿರುವುದು, ಈಗಿರತಕ್ಕ ಕಾನೂನನ್ನು ಉತ್ತಮಪಡಿಸಬೇಕಾಗಿರುವುದು ಸರ್ಕಾರದ ಕರ್ತವ್ಯ,, ಆದರೇ, ಈಗ ತಂದಿರತಕ್ಕ ತಿದ್ದುಪಡಿಗಳನ್ನು ನೋಡಿದರೆ, ಈ ಕಾನೂನನ್ನು ಉತ್ತಮಪಡಿಸತಕ್ಕ ರೀತಿಗಿಂತ, ಉತ್ತಮಪಡಿಸಲು ಹೋಗತಕ್ಕ ದಿಕ್ಕಿಗಿಂತ ಆದರ ವಿರುದ್ಧ ದಿಕ್ಕಿನಲ್ಲಿ ಹೋಗತಕ್ಕ ತಿದ್ದುಪಡಿಗಳನ್ನು ನಾವು ಇದರಲ್ಲಿ ಕಾಣುತ್ತಿದ್ದೇವೆ. ಈ ಮಸೂದೆ ಈ ಸದನದ ಒಪ್ಪಿಗೆಯನ್ನು ಪಡೆಯಬೇಕೆಂಬ ಉದ್ದೇಶದಿಂದಲೇ ಈ ಸದನವನ್ನು ಹಿಂದೆ ಕರೆದಿದ್ದು, ಇದೇ ಉದ್ದೇಶಕ್ಕೋಸ್ಕರವಾಗಿಯೇ ಪುನಃ ಸ್ವಲ್ಪ ದಿವಸ ರಜೆ ಕೊಟ್ಟಮೇಲೆ, ಮತ್ತೆ ಇವತ್ತು ನಡೆಯುತ್ತಿರತಕ್ಕ ಅಧಿವೇಶನ ಕೂಡ ಈ ಸದನದ ಒಪ್ಪಿಗೆಯನ್ನು ಪಡೆಯುವ ಕಾರಣಕ್ಕೋಸ್ಕರವಾಗಿಯೇ ಇಲ್ಲಿ ಚರ್ಚೆ ನಡೆಸುತ್ತಿದ್ದೇವೆ. ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ, ಇದರ ಮೇಲೆ ತಂದಿರತಕ್ಕ ತಿದ್ದುಪಡಿಗಳು ಸರಿಯೇ ತಪ್ಪೇ ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ, ಅವರಿಗೆ ಬಹುಮತ ಇದೆ. ನಾವು ವಿರೋಧಪಕ್ಷದಲ್ಲಿದ್ದೇವೆ. ಆದ್ದರಿಂದ ಇದರ ಬಗ್ಗೆ ನಮಗೆ ತೋಚಿದದ್ದನ್ನು ನಾವು ಹೇಳಬೇಕಾಗುತ್ತದೆ. ನಮಗೆ ವಹಿಸಿದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುವುದು ನಮ್ಮ ಕರ್ತವ್ಯ. ಈ ಸದನದ ಒಪ್ಪಿಗೆ ಪಡೆಯಬೇಕಾಗಿರುವುದು ಆಡಳಿತಪಕ್ಷದ ಕರ್ತವ್ಯ. ಆದರೆ, ಸರ್ಕಾರದವರು ಎಷ್ಟರಮಟ್ಟಿಗೆ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇವತ್ತು ಈ ಮಸೂದೆಯ ಬಗ್ಗೆ ತಂದಿರತಕ್ಕ ತಿದ್ದುಪಡಿಗಳು ನಮ್ಮ ಎದುರಿಗೆ ಇದೆ. ಇದರ ಬಗ್ಗೆ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಿದ್ದೇವೆ. ವಿರೋಧಪಕ್ಷದ ಸಾಲಿನಲ್ಲಿ ಕುಳಿತು, ನಮಗೆ ಸರಿ ಎಂದ ತೋಚಿದ್ದು ಯಾವುದು, ಮತ್ತು ಯಾವುದು ಜನತೆಯ ಹಿತವನ್ನು ಕಾಪಾಡುವುದಿಲ್ಲ. ಎಂಬ ಸದಭಿಪ್ರಾಯ ನಮಗೆ ಬಂದಮೇಲೆ

ನಾವು ಇದನ್ನು ವಿರೋಧ ಮಾಡತಕ್ಕ ಕೆಲಸವನ್ನು ನಾವು ಮಾಡಿದ್ದೇವೆ, ಇದಕ್ಕೆ ಪ್ರತಿರೋಧ ಒಡ್ಡತಕ್ಕ ಕೆಲಸವನ್ನು ಕೂಡ ಮಾಡಿದ್ದೇವೆ. ಈ ಸರ್ಕಾರಕ್ಕೆ ಸರಿಯಾದ ಧೋರಣೆ, ಸರಿಯಾದ ನಿಲವು ಈ ಬಗ್ಗೆ ಇಲ್ಲವೇ ಇಲ್ಲ, ಇದು ಯಾವುದರಿಂದ ಸಾಬೀತಾಗುತ್ತಿದೆ ಎಂದು ಹೇಳಿದರೆ, ದುರಾದೃಷ್ಟ ಎಂದು ಹೇಳಿದರೆ ಈ ಕಾನೂನಿನಲ್ಲಿರತಕ್ಕ ಲೋಪದೋಷಗಳನ್ನು ಈ ಸಾಲಿನಲ್ಲಿ ಕುಳಿತಿರತಕ್ಕ ನಮ್ಮ ಸದಸ್ಯರು, ಜನತಾದಳದ ಸದಸ್ಯರು ಇರಬಹುದು, ಬೇರೆ ಸದಸ್ಯರೂ ಇರಬಹುದು, ಈ ಸದನದಲ್ಲಿ ಧರಣಿ ಮಾಡಿ, ಇದರಲ್ಲಿರತಕ್ಕ ಲೋಪದೋಷಗಳನ್ನು ನಾವು ಬಹಿರಂಗಪಡಿಸಿದ ಮೇಲೆ ಆಡಳಿತ ಪಕ್ಷದ ಸದಸ್ಯರು ಕಣ್ಣು ತೆಗೆಯುತ್ತಾರೆ. ಈ ಮಸೂದೆ ನಮ್ಮ ಎದುರಿಗೆ ಇದೆ. ಇದರ ಬಗ್ಗೆ ನಾವು ಚರ್ಚೆ ಮಾಡಬೇಕು, ಅಧ್ಯಯನ ಮಾಡಬೇಕು ಎಂಬ ಪರಿಸ್ಥಿತಿಗೆ ಯಾವಾಗ ಬರುತ್ತಾರೆಂದರೆ ನಾವು ಲೋಪದೋಷಗಳನ್ನು ಸದನದ ಮುಂದೆ ಇಟ್ಟಾಗ ಮಾತ್ರ ಕಣ್ಣು ತೆರೆಯುತ್ತಾರೆ. ಇದಕ್ಕಿಂತ ಮುಖ್ಯವಾಗಿ, ಮುಖ್ಯಮಂತ್ರಿಯಾಗಿರುವವರು ಈ ಸದನದಲ್ಲಿ ಈ ಬಗ್ಗೆ ಹೇಳಿದ್ದು ದಾಖಲೆಯಲ್ಲಿದೆ. ಅವರು ಹೇಳಿದ್ದು ಏನೆಂದರೆ, ಈ ಕಾನೂನನ್ನು ನಾನು ಓದುವುದಕ್ಕಾಗಲಿಲ್ಲ, ಈ ಕಾನೂನಿನಲ್ಲಿ ತಿಳಿದುಕೊಳ್ಳಬೇಕಾಧ ಅಂಶಗಳಿವೆ ಎಂದು ಇದೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿರುವವರು ಹೇಳಿದ್ದಾರೆ.

ಇದೆನ್ನೆಲ್ಲಾ ನೋಡಿದರೆ ಎಷ್ಟರಮಟ್ಟಿಗೆ ಇವರು ಇವತ್ತು ಈ ಕಾನೂನನ್ನು ಜಾರಿಗೆ ಕೊಡುವುದು ಒಂದು ಕಡೆ ಇರಲಿ, ಇದಕ್ಕೆ ಈ ಸದನದ ಒಪ್ಪಿಗೆಯನ್ನು ಪಡೆಯತಕ್ಕಂಥ ಯಾವ ಪ್ರಯತ್ನ ಮಾಡಿದ್ದಾರೆ, ಇದು ಬಹುಶಃ ಈ ಸದನದ ಚರಿತ್ರೆಯಲ್ಲಿ, ಆಡಳಿತ ಪಕ್ಷಕ್ಕೆ ಎಷ್ಟೇ ಬಹುಮತ ಇದ್ದರೂ ಸಹ, ಇಂತಹ ಒಂದು ಪ್ರಮುಖವಾದಂಥ ಕಾನೂನನ್ನು ಪ್ರಮುಖರಾದ ತಿದ್ದುಪಡಿ ಮಸೂದೆಯನ್ನು ತಂದು ಅದನ್ನು ಕಾನೂನನ್ನಾಗಿ ಮಾರ್ಪಾಡುಮಾಡುವ ಪರಿಸ್ಥಿತಿ ಒದಗಿದಾಗ, ಇಂತಹ ಒಂದು ದುರ್ಗತಿ ಹಿಂದೆ ಯಾವಾಗ ಕೂಡಾ ಒದಗಿರಲಿಲ್ಲ, 179 ಸದಸ್ಯರ ಬೆಂಬಲ ಬಲ, ಉಳಿದ ಸದಸ್ಯರ ಬೆಂಬಲ ಬಲ ಎಲ್ಲಾ ನಿಮಗಿದ್ದರೂ ಕೂಡಾ ಇಂತಹ ಒಂದು ಕಾನೂನನ್ನು ತರಲು ಈ ಸದನದ ಒಪ್ಪಿಗೆ ಪಡೆಯುವುದರಲ್ಲಿ ಹಿಂದೆ ಇದ್ದಂಥ ಯಾವ ಸರಕಾರಗಳೂ ಈ ಪರಿಸ್ಥಿತಿಗೆ ಬಂದಿರಲಿಲ್ಲ, ಇಷ್ಟೊಂದು ವಿಫಲತೆಯನ್ನು, ಅಸಹಾಯಕತೆಯನ್ನು ಯಾವತ್ತೂ ಕೂಡಾ ತೋರಿಸಿಲ್ಲ, ಇದು ದುರಾದೃಷ್ಟಕರ ಮತ್ತು ಪ್ರಜಾಪ್ರಭುತ್ವಕ್ಕೆ ಇದು ಮಾರಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ತಾವು ಮಾತನಾಡುವ ಕಾಲಕ್ಕೆ ವಿಫಲತೆ ಎಂದು ಹೇಳಿದಿರಿ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟವರು ನಾವು, ತಮಗೆ ನಾವು ಸ್ಥಂದನ ಕೊಡುತ್ತಿದ್ದೇವೆ. ಜನರಿಗೆ ಸ್ಥಂದನ ಕೊಡುತ್ತಿದ್ದೇವೆ. ಇನ್ನೂ ಚರ್ಚೆ ನಡೆದಿದೆ. ಇದು ವಿಫಲತೆ ಎಂದು ಹೇಗೆ ಹೇಳುತ್ತಿದ್ದೀರಿ. 179 ಜನ ಸದಸ್ಯರ ಬೆಂಬಲ ನಮಗೆ ಇದ್ದರೂ ಕೂಡ ಸರಿಯಾದಂಥ ನಿರ್ಣಯಕ್ಕೆ ಬರಬೇಕೆಂಬ ಒಂದು ಮಾತು ಇದರಲ್ಲಿ ಇದೆ.

ಶ್ರೀ ಸಿ. ಬೈರೇಗೌಡ : ನನ್ನ ಮಾತನ್ನು ಮಾನ್ಯ ಪಾಟೀಲರು ಸ್ಥಿರೀಕರಿಸುತ್ತಿದ್ದಾರೆ. ಈ ಕಾನೂನನ್ನು ಸದನದ ಮುಂದೆ ತಂದಿಟ್ಟಾಗ ನೀವು ಆಳವಾದ ಅಭ್ಯಾಸ ಮಾಡಿಲ್ಲ, ಈ ಕಾನೂನು ಕಳೆದ ಮೂರೂವರೆ ನಾಲ್ಕು ವರ್ಷದಿಂದ ಈ ರಾಜ್ಯದಲ್ಲಿ ಯಾವರೀತಿ ಜಾರಿಯಾಗುತ್ತಿದೆ, ಇದರ ಕಷ್ಟನಷ್ಟಗಳು ಏನು ಇದರ ಅಗುಹೋಗುಗಳು ಏನು ಎಂಬ ಮಾಹಿತಿ ತಮ್ಮ ಹತ್ತಿರ ಇರಲಿಲ್ಲ, ಈ ದಿಕ್ಕಿನಲ್ಲಿ ತಾವು ಕೆಲಸ ಮಾಡಲಿಲ್ಲ, ಅದನ್ನು ವ್ಯಾಲ್ಯುಯೇಷನ್ ಮಾಡತಕ್ಕಂಥ ಮತ್ತು ಅದನ್ನು ತರ್ಕಕ್ಕೆ

ಒಪ್ಪಿಸತಕ್ಕಂಥ ಕೆಲಸ ತಾವು ಮಾಡಲಿಲ್ಲ, ತರಾತುರಿಯಲ್ಲಿ ತಂದಿರಿ. ಮಾನ್ಯ ಬಸವಲಿಂಗಪ್ಪನವರಿಗೆ ಒಂದೊಂದು ಸಲ ಜ್ಞಾನೋದಯವಾಗುತ್ತದೆ ಎಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಬುದ್ಧ ಬಸವ ಇವರನ್ನು ಮೀರಿಸಿದಂಥ ಬಸವಲಿಂಗಪ್ಪನವರಿಗೆ ಒಂದೊಂದು ಸಲ ಜ್ಞಾನೋದಯವಾಗುತ್ತದೆ, ಬ್ರೇನ್ ವೇವ್ ಹೊಡೆಯುತ್ತದೆ ಎಂದು ಹೇಳಿದರು.

ಶ್ರೀ ಹೆಚ್. ಏಕಾಂತಯ್ಯ : ಬ್ರೇನ್ ವೇವ್ ಅಥವಾ ಬ್ರೇನ್ ವಾಷೋ?

ಶ್ರೀ ಬಿ. ಬಸವಲಿಂಗಪ್ಪ : ಸ್ವಾಮಿ ಅಧ್ಯಕ್ಷರೇ, ನಾನು ಇದನ್ನು ಪರಿಶೀಲನೆಗೆ ಮೂವ್ ಮಾಡುವಾಗ ತಾವು ಇದ್ದಿಲ್ಲ ಎಂದು ಕಾಣುತ್ತದೆ. ಯಾವ ಯಾವ ಜಿಲ್ಲಾ ಪರಿಷತ್ತುಗಳವರು ಏನೇನು ಮಾಡಿದ್ದಾರೆ ಎಂದು ಹೇಳಿದ್ದೇನೆ. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ಸ್ ಕೊಟ್ಟಿದ್ದಾರೆಯೇ ಮತ್ತು ಆಡಿಟ್ ರಿಪೋರ್ಟ್ಸ್ ಮಾಡಿ ಕಳುಹಿಸಿದ್ದಾರೆಯೇ ಎಂದು ಹಾಗೂ ಇದುವರೆಗೆ ಯಾವ ಜಿಲ್ಲಾ ಪರಿಷತ್‌ನವರು ಏನೇನು ಮಾಡಿದ್ದಾರೆ, ಮಂಡಲ್ ಪಂಚಾಯತಿಯವರು ಏನು ಮಾಡಿದ್ದಾರೆ ಎಂದು ನಾವೆಲ್ಲಾ ತನಿಖೆ ಮಾಡಿದ್ದೇವೆ. ಅವರು ಯಾವ ರೀತಿಯಲ್ಲಿ ಕಾನೂನೆಲ್ಲವನ್ನೂ ಧೂಳೀಪಟ ಮಾಡಿ ಏನೇನು ಮಾಡಿದ್ದಾರೆಂದು ಹೇಳಿದೆ, ತಾವು ಇರಬೇಕಾಗಿತ್ತು. ನನಗೆ ಜ್ಞಾನೋದಯ ಆದ ತಕ್ಷಣ ಏನು ಇದನ್ನು ತಂದಿಲ್ಲ. ನಾನು ಒಬ್ಬ ಸಮಾಜ ಸೇವಕ ಇದ್ದೇನೆ. ನನ್ನ ಜೀವನದುದ್ದಕ್ಕೂ ಈ ಕೆಲಸ ಮಾಡಿಕೊಂಡು ಬಂದಿದ್ದೇನೆ. ತಾವೆಲ್ಲಾ ಏನು ಹೇಳುತ್ತೀರಿ ಅದರಂತೆ ಮಾಡುತ್ತೇನೆ. ನನ್ನ ಸಮಂತದ್ದು ಏನಿದೆ. ಸ್ವಂತದ್ದಾದರೆ ನಾನು ದೊಡ್ಡ ಮನುಷ್ಯ ಆಗುತ್ತೇನೆ ನಾನು ಪಾರ್ಟಿ ಕೆಲಸ ಮಾಡುತ್ತಿದ್ದೇನೆ. ಪಾರ್ಟಿಯವರು ಏನು ಹೇಳುತ್ತಾರೆ ಅದನ್ನು ಮಾಡುತ್ತಿದ್ದೇನೆ. ನ್ಯೂನತೆಗಳು ಇದ್ದರೆ ಅದನ್ನು ಸರಿಪಡಿಸುತ್ತೇನೆ. ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಜನರಿಗೆ ಉಪಕಾರವಾಗಲಿ ಎಂದು ಯೋಜನೆ ಮಾಡಿ ಈ ತಿದ್ದುಪಡಿಯನ್ನು ತಂದಿದ್ದೇನೆ. ಆದರೂ ನೀವು ಏಕಾಏಕಿ ಹೀಗೆಲ್ಲಾ ಆಪಾದನೆ ಮಾಡುವುದು ಸರಿಯೇ ಎಂದು ಯೋಚನೆ ಮಾಡಿ.

ಶ್ರೀ ಹೆಚ್. ಏಕಾಂತಯ್ಯ : ಆಪಾದನೆ ಮಾಡಲಿಲ್ಲ, ಹೊಗಳಿದರು ;

ಶ್ರೀ ಬಿ.ಇ. ಬಸವಲಿಂಗಪ್ಪ : ಹೊಗಳಿದ್ದರೆ ಆಯಿತು. ಆದರೆ ಈ ಸಗಟು ವ್ಯಾಪಾರ ಮಾಡಬೇಡಿ.

ಶ್ರೀ ಸಿ. ಬೈರೇಗೌಡ : ತಾವು ನನಗೆ ಹೇಳುವ ಮೊದಲು ಮಲ್ಲಾರಿಗೌಡ ಪಾಟೀಲರಿಗೆ ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಮಂತ್ರಿಗಳು ಹೇಳಿದರಲ್ಲ ಅದನ್ನೇ ನಾನೂ ಹೇಳಿದೆ. ನಮ್ಮದು ಮೆಜಾರಿಟಿ ಇದ್ದರೂ ಈ ಸದನದ ಮುಂದೆ ಎಲ್ಲ ವಿವರವಾಗಿ ಇಟ್ಟಿದ್ದೇವೆ. ತಾವು ಏತಕ್ಕೆ ನಮ್ಮ ಪಕ್ಷದ ಬಗ್ಗೆ ಯೋಚನೆ ಮಾಡುತ್ತಿದ್ದೀರಿ. ತಾವೆಲ್ಲರೂ ಕೂಡಿ ಮಾಡಿದಂಥ ತಪ್ಪಿಗೆ ತಮಗೆ ಪ್ರಾಯಶ್ಚಿತ್ತ ಸಿಕ್ಕಿದೆ. ಆ ತಪ್ಪನ್ನು ನಾವು ಮಾಡಬಾರದೆಂದು ಇದ್ದೇವೆ. ಅದು ನಮ್ಮ ತಪ್ಪೇ.

ಶ್ರೀ ಎಲ್.ಆರ್. ಶಿವರಾಮೇಗೌಡ: ನಾವು 177 ಜನ ಇದ್ದರೂ ಸಹಿತ ಸದನದ ಮುಂದೆ ಇಟ್ಟು ಚರ್ಚೆ ಮಾಡಲು ಅವಕಾಶ ಕೊಡುತ್ತಿದ್ದೇವೆ. ನೀವು 110 ಜನ ಇದ್ದರೂ ವಿರೋಧ ಪಕ್ಷದ ಶಾಸಕರನ್ನೆಲ್ಲಾ ನೀವು ಹೊರಕ್ಕೆ ಹಾಕಿ ಬಿಟ್ಟು ಎಲ್ಲ ಮಸೂದೆಗಳನ್ನು ಪಾಸ್ ಮಾಡಿಸಿಕೊಂಡಿದ್ದಿರಿ;

ಶ್ರೀ ಸಿ. ಭೈರೇಗೌಡ : ಯಾವುದನ್ನೋ ಯಾವುದಕ್ಕೋ ಹೇಳುವುದಕ್ಕೆ ಹೋಗಬೇಡಿ.

ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರಾದ ಶ್ರೀಮಾನ್ ಪಾಟೀಲರಿಗೆ ನಾನು ಒಂದು ಮಾತು ಹೇಳಬಯಸುತ್ತೇನೆ. ನಿಮ್ಮ ಪಕ್ಷ ಇವತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರವನ್ನು ನಡೆಸತಕ್ಕ ಪಕ್ಷ. ಇದರ ಬಗ್ಗೆ ತಾವು ಶ್ರದ್ಧೆ ವಹಿಸಬೇಕಾಗಿತ್ತು. ಆದರೆ ನೀವು ಏನು ಮಾಡಿದ್ದೀರಿ. ಏನು ಮಾಡಲಿಲ್ಲ ಎಂಬ ಬಗ್ಗೆ ಕಣ್ಣಿನಲ್ಲಿ ಕಣ್ಣು ಇಟ್ಟು ನೋಡಬೇಕಾಗಿರುವುದು ನಮ್ಮ ಕರ್ತವ್ಯ. ಇದನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ನಾನು ಹೇಳಿದ್ದೇನೆಯೇ ವಿನಹ ಮತ್ತೇನೂ ಅಲ್ಲ. ಈ ಕಾನೂನು ಬಗ್ಗೆ ನಾವು ಹೇಳಬೇಕಾದ್ದನ್ನು ಹೇಳಲೇಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಸಚಿವರಾದ ಬಸವಲಿಂಗಪ್ಪನವರಿಗೆ ಬ್ರೇನ್ ವೇವ್ ಎಂದು ಹೇಳಿದ್ದಕ್ಕೆ ಕಾರಣ ಇಲ್ಲದೆ ನಾನು ಹೇಳಲಿಲ್ಲ. ನಿಮ್ಮ ಮಾನ್ಯ ಮುಖ್ಯಮಂತ್ರಿಗಳೇ ಈ ಸದನದಲ್ಲಿ ಹೇಳಿದ್ದಾರೆ. ಏನೆಂದರೆ ಈ ಕಾನೂನನ್ನು ನಾನು ಪೂರ್ತಿಯಾಗಿ ಸರಿಯಾಗಿ ನೋಡಲಿಕ್ಕೇ ಆಗಲಿಲ್ಲ ಎನ್ನುವ ಮಾತನ್ನುಹೇಳಿದ್ದಾರೆ. ಅವರು ಹಾಗೆ ಹೇಳುವುದಾದರೆ ಒಂದು ಮಸೂದೆಯನ್ನು ತರುವಾಗ ಸಂಬಂಧಪಟ್ಟ ಇಲಾಖೆಯವರು ಮತ್ತು ಮಂತ್ರಿಗಳಾಗಿರತಕ್ಕಂಥವರು ಇದನ್ನು ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆ ಕಾನೂನಿನ ರೂಪರೇಷಗಳು ಯಾವ ರೀತಿಯಲ್ಲಿರಬೇಕೆನ್ನುವುದನ್ನು ಸಹ ಅವರು ಆಲೋಚನೆ ಮಾಡಬೇಕಾಗುತ್ತದೆ. ಅದರ ಪ್ರಕಾರ ಮೊದಲು ಒಂದು ಕರಡು ಪ್ರತಿಯನ್ನು ಅವರು ತಯಾರು ಮಾಡಬೇಕಾಗುತ್ತದೆ. ಆ ಕರಡು ಪ್ರತಿ ತಯಾರು ಮಾಡಿದ ಮೇಲೆ ನಮ್ಮಲ್ಲಿ ಕಾನೂನು ಇಲಾಖೆ ಒಂದು ಏನು ಇದೆ, ಆ ಕಾನೂನು ಇಲಾಖೆಗೆ ಹೋಗಬೇಕಾಗುತ್ತದೆ. ಅಲ್ಲಿಂದ ಅದು ಕ್ಯಾಬಿನೆಟ್ ಮುಂದೆ ಬಂದು, ಅಲ್ಲಿ ಅದಕ್ಕೆ ಕ್ಯಾಬಿನೆಟ್ ಒಪ್ಪಿಗೆ ಕೊಡಬೇಕಾಗುತ್ತದೆ. ಈ ರೀತಿ ಇದ್ದರೂ, ಸಹ ಏತಕ್ಕೆ ಇದನ್ನು ತಾವು ಆಳವಾಗಿ ಅಭ್ಯಾಸ ಮಾಡಲಿಲ್ಲ ಎಂದು ಹೇಳಿದ್ದೇನೆ ಎಂದರೆ, ಅದಕ್ಕೆ ನಿಮ್ಮ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ನಾನೇನೂ ಹೇಳಬೇಕಾಗಿಲ್ಲ.

(ಶ್ರೀ ಎಸ್. ಎಂ. ಕೃಷ್ಣರವರು ಅಧ್ಯಕ್ಷ ಪೀಠಕ್ಕೆ ಬಂದರು)

ಇದನ್ನು ತಾವು ಆಳವಾಗಿ ಅಭ್ಯಾಸ ಮಾಡಿಲ್ಲ ಎಂದು ನಾನು ಒತ್ತಿ ಒತ್ತಿ ಹೇಳಬೇಕಾಗಿಲ್ಲ. ಅದಕ್ಕೆ ತಮ್ಮ ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆನ್ನುವುದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಗ್ರಾಮಾಂತರ ಪ್ರದೇಶದಲ್ಲಿ ಈ ಕಾನೂನಿನ ಮಹತ್ವ ಮತ್ತು ಈ ಕಾನೂನಿನಿಂದ ಜಾರಿಗೊಳಿಸತಕ್ಕಂಥ ಕಾರ್ಯಕ್ರಮಗಳು ಏನಿದ್ದಾವೆ, ಅವು ಗ್ರಾಮಾಂತರ ಪ್ರದೇಶಗಳ ಚಿತ್ರವನ್ನೇ ಬದಲಾವಣೆ ಮಾಡತಕ್ಕಂಥ ಒಂದು ಕಾನೂನು ಇದು. ಇಂತಹ ಒಂದು ಕಾನೂನನ್ನು ತರತಕ್ಕಂಥ ಸಂದರ್ಭದಲ್ಲಿ ಈಗ ತರತಕ್ಕಂಥ ಕಾನೂನು ಏನಾಗಿದೆ, ಯಾವ ರೀತಿಯಲ್ಲಿ ಇದು ಜಾರಿ ಆಗುತ್ತದೆ ಎನ್ನತಕ್ಕಂಥ ಪೂರ್ಣ ಚಿತ್ರ ಇರಬೇಕಾಗಿತ್ತು. ಅದು ಇವತ್ತಿನ ದಿವಸ ತಮ್ಮ ಬಳಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನನ್ನ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ನಾವು ಮಂಡಲಗಳನ್ನು ಹೆಚ್ಚು ಮಾಡತಕ್ಕಂಥ ವಿಚಾರದಲ್ಲಿ ಹೇಳಿದ್ದಾರೆ. ಈಗ ಜನರು 10-15 ಮೈಲಿಗಳು ಹೋಗಬೇಕಾಗಿದೆ. ಇದರಿಂದ ಗ್ರಾಮಾಂತರ ಪ್ರದೇಶದ ಜನಗಳಿಗೆ ತೊಂದರೆಯಾಗಿದೆ ಆದ್ದರಿಂದ ಈಗ ಇರತಕ್ಕಂಥ ಮಂಡಲ ಪಂಚಾಯತಿಗಳ ಸಂಖ್ಯೆ ಜಾಸ್ತಿ ಮಾಡುತ್ತೇವೆ ಮತ್ತು ಕೆಲವು ಮಂಡಲಗಳನ್ನು ಎರಡೆರಡು ಮಾಡಲು ಪ್ರಯತ್ನ ಪಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದರು. ಈ ಬಗ್ಗೆ ನಾನು ಆಗಲೇ ಒಂದು ಲೆಕ್ಕಾಚಾರ ಹಾಕಿ ಹೇಳಿದೆ. ಆ ಪ್ರಕಾರ ಜಾಸ್ತಿ ಮಾಡುವುದಾದರೆ ಒಂದು ತಿಂಗಳಿಗೆ ಈ ಮಂಡಲಗಳಿಗೆ

ಸುಮಾರು ಒಂದು ಕೋಟಿ 5 ಲಕ್ಷ ರೂಪಾಯಿಗಳ ಹಣ ಖರ್ಚಾಗುತ್ತದೆ. ಈಗ ಇರತಕ್ಕಂಥ ಮಂಡಲಗಳನ್ನು ಎರಡು ಮಾಡುವುದರಿಂದ ಸುಮಾರು 5 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಅದೂ ಕಡಿಮೆ ಅಂದಾಜಿನಲ್ಲಿ ನಾನು ಲೆಕ್ಕಾಚಾರ ಮಾಡಿದ್ದೇನೆ. ಅಲ್ಲಿ ಒಬ್ಬ ಕಾರ್ಯದರ್ಶಿ ಇರಬೇಕಾಗುತ್ತದೆ. ಛೇರ್ಮನ್ ಮತ್ತು ವೈಸ್ ಛೇರ್ಮನ್ ಇರಬೇಕಾಗುತ್ತದೆ. ಮಂಡಲ ಪಂಚಾಯತಿಗಳ ಸಭೆ ಸೇರಬೇಕಾಗುತ್ತದೆ. ಆ ಸಭೆಗಳ ಖರ್ಚು ಛೇರ್ಮನ್ ಮತ್ತು ವೈಸ್ ಛೇರ್ಮನಗಳ ಸಂಭಾವನೆ ಹಾಗೂ ಸದಸ್ಯರ ಸಂಭಾವನೆ ಇವೆಲ್ಲಾ ಹೆಚ್ಚಾಗುತ್ತದೆ. ಮತ್ತು ಮಂಡಲ ಪಂಚಾಯತಿಯಲ್ಲಿ ಒಬ್ಬರು ಕಾರ್ಯದರ್ಶಿ ಇರಬೇಕಾಗುತ್ತದೆ. ಈ ಮಂಡಲ ಪಂಚಾಯತಿ ಕಾರ್ಯದರ್ಶಿಯವರಿಗೆ ತಿಂಗಳಿಗೆ ಎರಡುವರೆ ಸಾವಿರದಿಂದ ಮೂರು ಸಾವಿರ ರೂಪಾಯಿವರೆಗೆ ಖರ್ಚಾಗುತ್ತದೆ. ಮತ್ತು ಅವರಿಗೆ ಸಿಬ್ಬಂದಿಯೂ ಬೇಕಾಗುತ್ತದೆ. ಇದರ ಜೊತೆಗೆ ಬಿಲ್ ಕಲೆಕ್ಟರ್ಸ್ ಎಂದು ತಾತ್ಕಾಲಿಕವಾಗಿ ಮಂಡಲ ಪಂಚಾಯಿತಿಗಳಲ್ಲಿ ನೇಮಕ ಮಾಡಿಕೊಂಡಿದ್ದಾರೆ. ಆ ತರಹದವರು ಇಬ್ಬರು ಮೂವರು ಇರುತ್ತಾರೆ ; ಇವರಿಗೆಲ್ಲಾ ತಿಂಗಳಿಗೆ ಒಂದು ಸಾವಿರ ಅಥವಾ ಒಂದೂವರೆ ಸಾವಿರ ರೂಪಾಯಿ ಖರ್ಚಾಗುತ್ತದೆ. ಪ್ರತಿ ಮಂಡಲಕ್ಕೂ ಹೀಗೆ 5 ಸಾವಿರ ರೂಪಾಯಿ ಹೆಚ್ಚಿಗೆ ಖರ್ಚಾಗುತ್ತದೆ. ಇದನ್ನು ಯಾವ ಅರ್ಥದಲ್ಲಿ ಹೇಳುತ್ತಿದ್ದೇನೆಂದರೆ, ನಾನು ಮೋಸ್ಟ್ ಕನ್‌ಸರ್ವೆಟಿವ್ ಅರ್ಥದಲ್ಲಿ. ಇದು ಇನ್ನೂ ಜಾಸ್ತಿ ಆಗುತ್ತದೆಯೇ ಹೊರತು 5 ಸಾವಿರಕ್ಕಿಂದ ಕಡಿಮೆಯಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಪ್ರಥಮದಲ್ಲಿ ಬಂದಾಗ ಹಿಂದಿನ ಮುಖ್ಯಮಂತ್ರಿ ಆಗಿದ್ದಂಥ ಮಾನ್ಯ ವೀರೇಂದ್ರಪಾಟೀಲರು ಮತ್ತೆ ಅವರ ಮಂತ್ರಿ ಮಂಡಲದಲ್ಲಿ ಅರ್ಥ ಮಂತ್ರಿಗಳಾಗಿದ್ದಂಥ ಮಾನ್ಯ ರಾಜಶೇಖರ ಮೂರ್ತಿಯವರು ಏನು ಹೇಳಿದ್ದಾರೆಂದರೆ, ಈಗಿರತಕ್ಕಂಥ ಸರ್ಕಾರಿ ನೌಕರರಲ್ಲಿ ಎರಡು ಸರ್ಕಾರಗಳನ್ನು ನಡೆಸಲಿಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಹೇಳಿದ್ದರು. ಅದಕ್ಕೋಸ್ಕರವೇ ಈ ನಿವೃತ್ತಿ ವಯಸ್ಸನ್ನು 58 ರಿಂದ 55ಕ್ಕೆ ಇಳಿಸಬೇಕೆನ್ನುವ ಭಾವನೆ ಅವರಲ್ಲಿ ಇತ್ತೆಂದು ನಾನು ಭಾವಿಸುತ್ತೇನೆ. ಇವತ್ತು ಮಂಡಲ ಪಂಚಾಯತಿಗಳ ಸಂಖ್ಯೆ ಹೆಚ್ಚು ಮಾಡುವುದರಿಂದ ಏನಾಗುತ್ತದೆಂದರೆ, ಈ ಸರ್ಕಾರಿ ನೌಕರರ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತದೆ ಮತ್ತೆ ಭ್ರಷ್ಟಾಚಾರದ ಬಗ್ಗೆ ವಿರೋಧ ಪಕ್ಷದಲ್ಲಿದ್ದುಕೊಂಡು ನಾವು ಹೇಳಿದರೆ ಅದನ್ನು ನೀವು ಅಲ್ಲಗಳೆಯಬಹುದು. ಆದರೆ, ಆಡಳಿತ ಪಕ್ಷದ ಸಚಿವರುಗಳೇ ಅನೇಕ ಸಂದರ್ಭಗಳಲ್ಲಿ ಈ ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ. ಎಷ್ಟು ಈ ಸರ್ಕಾರಿ ನೌಕರರನ್ನು ಹೆಚ್ಚು ಮಾಡುತ್ತೀರೋ ಅಷ್ಟೇ ಪ್ರಮಾಣದಲ್ಲಿ ಕಿತ್ತುಕೊಳ್ಳುವ ಕೈಗಳು ಜಾಸ್ತಿಯಾಗುತ್ತವೆ. ಇಷ್ಟೇ ಇನ್ನೇನಿಲ್ಲ. ಮಾನ್ಯ ಬಸವಲಿಂಗಪ್ಪನವರು ಇದನ್ನು ತಿಳಿದುಕೊಳ್ಳಬೇಕು. ಆಮೇಲೆ ಪಂಚಾಯಿತಿಗಳಿಂದ ಲೈಸನ್ಸ್ ಕೊಡುವ ವಿಷಯ. ಲೈಸನ್ಸ್ ಕೊಡುವುದಕ್ಕೆ 5 ರೂಪಾಯಿ ಅಥವಾ 10 ರೂಪಾಯಿ ಫೀಸ್ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಇದು 5 ನೂರು ರೂಪಾಯಿಗಳಿಂದ 1 ಸಾವಿರ ರೂಪಾಯಿಗಳು ಇಲ್ಲದೆ ಲೈಸನ್ಸ್ ಸಿಕ್ಕುವುದಿಲ್ಲ. ಇಂತಹ ಲೈಸನ್ಸ್ ಕೊಡುವವರು 2500 ಜನರಿದ್ದಾರೆ. ಅವರಲ್ಲಿ ಎಲ್ಲರೂ ಭ್ರಷ್ಟರಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಬಹುತೇಕ ಭ್ರಷ್ಟರೇ ತುಂಬಿದ್ದಾರೆ ಕೇವಲ ಪಂಚಾಯತಿ ಕಾರ್ಯದರ್ಶಿಗಳಾಗಿರತಕ್ಕವರಿಗೆ ಬಿಟ್ಟು ಮಾಡಿ ತೋರಿಸತಕ್ಕಂಥ ಸಂದರ್ಭ ಇಲ್ಲ. ಆದರೆ ಅಂಥಾ ವಾತಾವರಣ ಇಡೀ ರಾಜ್ಯದಲ್ಲಿ ಮತ್ತು ನಮ್ಮ ಸಮಾಜದಲ್ಲಿ ನಿರ್ಮಾಣವಾಗಿದೆ. ಇವತ್ತಿನ ದಿವಸ ತಾವು ಈ ಮಂಡಲ ಪಂಚಾಯಿತಿಗಳ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಈ ಅಧಿಕಾರಿಗಳ ಸಂಖ್ಯೆಯನ್ನೂ ಹೆಚ್ಚು ಮಾಡುವುದರಿಂದ ನೀವು ಭ್ರಷ್ಟರನ್ನು ಹೆಚ್ಚು ಮಾಡಿದಂತಾಗುತ್ತದೆಯೇ ವಿನಃ ಅದರಿಂದ ಜನಕ್ಕೆ ಸಿಕತಕ್ಕಂಥ, ಜನಕ್ಕೆ ಆಗತಕ್ಕಂಥ

ಪ್ರಯೋಜನ ಅಷ್ಟರಲ್ಲೇ ಇದೆ. ನೀವು ಇದರ ಬಗ್ಗೆ ತನಿಖೆ ನಡೆಸಿ ; ಯಾವ ಯಾವ ಮಂಡಲ ಪಂಚಾಯಿತಿಗಳಲ್ಲಿ ಎಷ್ಟೆಷ್ಟು ಅರ್ಜಿಗಳು ಯಾವ ಯಾವ ವಿಚಾರದಲ್ಲಿ ಬಂದಿದ್ದವು; ಎಂದು ಆಗ ಗೊತ್ತಾಗುತ್ತದೆ. ಮನೆ ಕಟ್ಟಿಕೊಳ್ಳುವುದಕ್ಕೆ ಲೈಸನ್ಸ್ ಅರ್ಜಿಗಳು ಬರುತ್ತವೆ. ಎಷ್ಟು ಅರ್ಜಿಗಳು ತಿಂಗಳಾನುಗಟ್ಟಲೇ ಅಲ್ಲೇ ಇವೆ? ಇದಕ್ಕೆ ಕಾರಣ ಏನು? ಮಾನ್ಯ ಅಧ್ಯಕ್ಷರೇ, ಹಳ್ಳಿಗಳಲ್ಲಿರುವ ಮನೆಗಳಿಗೆ ವಿದ್ಯುತ್ ದೀಪವನ್ನು ತೆಗೆದುಕೊಳ್ಳಬೇಕಾದರೆ ಈ ಮನೆ ಇಂಥವರಿಗೇ ಸೇರಿರುತ್ತದೆ, ಇಂಥವರಿಗೆ ವಿದ್ಯುತ್ ದೀಪವನ್ನು ಒದಗಿಸಿ ಎಂದು ವಿದ್ಯುತ್ ಮಂಡಳಿಯವರಿಗೆ ಒಂದು ಸರ್ಟಿಫಿಕೇಟ್‌ನ್ನು ಮಂಡಲ ಪಂಚಾಯಿತಿಯವರು ಕೊಡಬೇಕಾಗುತ್ತದೆ. ಈ ಸರ್ಟಿಫಿಕೇಟ್‌ನ್ನು ಕೊಡುವುದಕ್ಕೆ ತಿಂಗಳುಗಟ್ಟಲೇ, ವರ್ಷಗಟ್ಟಲೇ ಇವತ್ತು ಅಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಇವತ್ತು ನೀವು ಈ ಬಿಲ್‌ನ್ನು ಪಾಸ್ ಮಾಡಿಕೊಳ್ಳಬೇಕು ಎನ್ನುವ ಆತುರದಲ್ಲಿ ಇದ್ದಂತೆ ಕಾಣುತ್ತಿಲ್ಲ. ಈ ಕಾನೂನನ್ನು ಪಾಸ್ ಮಾಡಿಕೊಳ್ಳತಕ್ಕಂಥ ಕಾತುರತೆಯಾಗಲೀ ಅಥವಾ ಇದನ್ನು ಜಾರಿಗೊಳಿಸುವ ಕಾತುರತೆಯಾಗಲೀ ನಿಮಗೆ ಇಲ್ಲ. ಏಕೆಂದರೆ, ನಿಮಗೆ ಡೆಲ್ಲಿಯಿಂದ ಪ್ರತಿಯೊಂದಕ್ಕೂ ಆದೇಶ ಬರಬೇಕು. ಇವರು ಆ ತರಹ ಇಲ್ಲವೆಂದು ಹೇಳುತ್ತಾರೆ. ಆದರೆ, ಪತ್ರಿಕೆಗಳಲ್ಲಿ ಈಗಾಗಲೇ ವರದಿಯಾಗಿದೆ. ಈ ಬಿಲ್‌ನ್ನು ವೋಟ್‌ಗೆ ಹಾಕಿಸುವುದಿಲ್ಲವೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದನ್ನು ನಿಮಗೇ ಬಿಡುತ್ತೇನೆ.

ಇದನ್ನು ಪಾಸ್ ಮಾಡಿಕೊಳ್ಳಬೇಕಾಗಿರತಕ್ಕದ್ದು ಅಥವಾ ಬೇಡ ಎಂದು ಹೇಳತಕ್ಕಂಥಹದು ಅಥವಾ ಅದನ್ನು ವಾಪಸ್ ತೆಗೆದುಕೊಳ್ಳಬೇಕಾಗಿರತಕ್ಕದ್ದು, ಈ ವಿಚಾರವನ್ನು ನಾನು ನಿಮಗೇ ಬಿಡುತ್ತೇನೆ. ಆದರೆ ನಾನು ಹೇಳತಕ್ಕದ್ದು ಏನು ಅಂದರೆ ನಿಮಗೆ ಈಗ ಸಮಯ ಸಿಕ್ಕಿದೆ. ಹೇಗಿದ್ದರೂ ಇದು ಮುಂ ದಕ್ಕೆ ಹೋಗುತ್ತದೆ. ಮುಂದಕ್ಕೆ ಹೋದಂತಹ ಸಂದರ್ಭದಲ್ಲಿ ಒಂದು ಜಿಲ್ಲೆಯ ಒಂದು ತಾಲ್ಲೂಕಿನಲ್ಲಿರತಕ್ಕಂಥಹ ಎಲ್ಲಾ ಮಂಡಲ್ ಪಂಚಾಯತ್‌ಗಳಲ್ಲಿ ಜನಸಾಮಾನ್ಯರಿಗೆ ಆಗಬೇಕಾಗಿರುವಂತಹ ಕೆಲಸ ಕಾರ್ಯಗಳ ಬಗ್ಗೆ ತಾವು ನೋಡಬೇಕು. ಮನೆ ಕಟ್ಟುವುದಕ್ಕೆ ಬಂದಿರತಕ್ಕ ಅರ್ಜಿಗಳು ; ಮನೆಗೆ ದೀಪವನ್ನು ಹಾಕಿಸಿಕೊಳ್ಳುವುದಕ್ಕೆ ಬಂದಿರತಕ್ಕ ಅರ್ಜಿಗಳು ಎಷ್ಟು ವರ್ಷದಿಂದ, ಎಷ್ಟು ತಿಂಗಳುಗಳಿಂದ ಇವು ಬಾಕಿಯಲ್ಲಿ ಉಳಿದಿವೆ ; ಬಾಕಿ ಉಳಿದಿರುವುದಕ್ಕೆ ಕಾರಣ ಏನು? ಇದರ ಹಿನ್ನೆಲೆಯಲ್ಲಿ ಏನು ಕಾರಣ ಇದೆ? ಈ ಬಗ್ಗೆ ವಿಚಾರ ಮಾಡಬೇಕು. ಒಂದು ತಾಲ್ಲೂಕಿನಲ್ಲಿ 10-12, ಇಲ್ಲವೇ 15-20 ಹೀಗೆ ಮಂಡಲ್ ಪಂಚಾಯತ್‌ಗಳು ಇರುತ್ತವೆ. ಅಲ್ಲಿಂದ ನಾನು ಹೇಳಿದ ಅಂಕಿಅಂಶಗಳನ್ನು ತರಿಸುವುದಾಗಲೀ ಅಥವಾ ಆ ವಿಚಾರದಲ್ಲಿ ತಾವು ತನಿಖೆ ನಡೆಸುವುದಾಗಲೀ ದೊಡ್ಡ ವಿಚಾರವೇನೂ ಆಗುವುದಿಲ್ಲ ಅಥವಾ ದೊಡ್ಡ ಸಮಸ್ಯೆ ಏನೂ ಆಗುವುದಿಲ್ಲ. ಒಂದು ವಾರದಲ್ಲಿ ತಾವು ಈ ಅಂಕಿ ಅಂಶಗಳನ್ನು ತರಿಸುವುದಕ್ಕೆ ಸಾಧ್ಯ ಇದೆ. ಅದನ್ನು ತರಿಸಿ. ಏಕೆಂದರೆ ಮೂಲಭೂತವಾಗಿ ಈ ಕೆಲಸವನ್ನು ಮಾಡಬೇಕಾಗಿರತಕ್ಕಂಥಹದು. ಮನೆ ಕಟ್ಟಬೇಕಾದರೆ ಲೈಸೆನ್ಸ್ ಕೊಡ ತಕ್ಕಂಥಹದು, ಮನೆ ಕಟ್ಟಿರುವವರಿಗೆ ವಿದ್ಯುತ್ ದೀಪವನ್ನು ಕೊಡತಕ್ಕಂಥಹದು, ಇದು ಅತೀ ಮುಖ್ಯವಾಗಿ ಮಾಡಬೇಕಾಗಿರುವಂತಹ ಕೆಲಸ. ಈ ಕೆಲಸ ನಿಲ್ಲಬೇಕಾದರೆ ಅದಕ್ಕೆ ಕಾರಣ ಏನು? ಕಾರಣ ಏನು ಅಂದರೆ ಲಂಚ. ಏನೂ ಇಲ್ಲ ; ಎಲ್ಲಾ ನಿಗದಿ ಮಾಡಿಬಿಟ್ಟಿದ್ದಾರೆ ಸ್ವಾಮಿ; ಇವತ್ತು ನನ್ನ ಸ್ವಂತ ಮಂಡಲ ಪಂಚಾಯತ್‌ನಲ್ಲಿ ಸುಮಾರು 26 ರಿಂದ 27 ಜನ ಸದಸ್ಯರು ಇದ್ದಾರೆ. ಅದರಲ್ಲಿ ಇರುವ ಐದಾರು ಜನರನ್ನು ಬಿಟ್ಟರೆ ಇನ್ನುಳಿದವರೆಲ್ಲಾ ನಮ್ಮ ಪಾರ್ಟಿಯವರೇ ; ನಾನು ಹೇಳಿರತಕ್ಕಂಥಹವರು ಇರತಕ್ಕವರು. ಸ್ವಾಮಿ ಏತಕ್ಕೆ ಮಂಡಲ್ ಪಂಚಾಯತ್

ವ್ಯವಸ್ಥೆಯನ್ನು ತಂದರು ಎಂದು ನನಗೆ ಕೂಡ ಅನಿಸುತ್ತದೆ. ಒಂದೊಂದು ಸಾರಿ ಅಲ್ಲ, ಒಂದೊಂದು ವಿಚಾರವನ್ನು ಹತ್ತತ್ತು ಸಾರಿ ಹೇಳಿದ್ದೇನೆ. ಲೈಸೆನ್ಸ್ ಕೊಡತಕ್ಕಂಥಹ ವಿಚಾರದಲ್ಲಿ ಜನರ ಮನೆಗೆ ದೀಪವನ್ನು ಕೊಡತಕ್ಕ ವಿಚಾರದಲ್ಲಿ ಯಾವ ಅರ್ಜಿಯೂ ವಿಲೇವಾರಿ ಆಗದೇ ಇರುವುದನ್ನು ನೋಡಿದ್ದೇನೆ. ಅರ್ಜಿ ಸರಿ ಇಲ್ಲದಿದ್ದರೆ ಸರಿ ಇಲ್ಲ ಎಂದು ಹೇಳಿ, ಸರಿ ಇದ್ದರೆ ವಿಲೇವಾರಿ ಮಾಡಿ ಎಂದು ಹೇಳಿದ್ದೇನೆ. ಅಲ್ಲಿ ನಮ್ಮ ಪಕ್ಷದವರು ಆರಿಸಿದಂತ ಉಪ ಪ್ರಧಾನ ಹಾಗೂ ನಮ್ಮ ಪಕ್ಷದ ಸುಮಾರು ಇಪ್ಪತ್ತಕ್ಕೂ ಮೇಲ್ಪಟ್ಟು ಸದಸ್ಯರು ಇದ್ದಾರೆ ; ಎಲ್ಲರೂ ಇದ್ದುಕೊಂಡು ನನ್ನ ಕೈಯಲ್ಲಿ ಈ ಕೆಲಸ ಮಾಡಿಸುವುದಕ್ಕೆ ಆಗಲಿಲ್ಲ. ಇದಕ್ಕೆ ಕಾರಣ ಏನು?

ಅಧ್ಯಕ್ಷರು : ನೀವು ಕಾರಣವನ್ನು ಹೇಳಬೇಕು. ಅವರು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೇ ಅವರು ತಿದ್ದುಪಡಿ ತಂದಿರುವುದು ; ಕಾರಣವಿದ್ದರೆ ನೀವು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಕಾರಣ ಏನೆಂದರೆ, ಅಧಿಕಾರದ ವಿಕೇಂದ್ರೀಕರಣ ಅಂತ ನಾವು ಏನು ಹೇಳುವುದಕ್ಕೆ ಹೊರಟಿದ್ದೇವೆ ಅದರ ಜೊತೆ ಈ ಭ್ರಷ್ಟಾಚಾರದ ವಿಕೇಂದ್ರೀಕರಣ ಆಗಿಬಿಟ್ಟಿದೆ. ಬಾಟಮ್ ಮೋಸ್ಟ್‌ಪಾಯಿಂಟಿಗೆ ಈ ಭ್ರಷ್ಟಾಚಾರದ ವಿಕೇಂದ್ರೀಕರಣ ಆಗಿ ಮುಟ್ಟಿಬಿಟ್ಟಿದೆ. ಇದರಲ್ಲಿ ನಾನೇ ವಿಫಲ ಆಗಿದ್ದೇನೆಂದು ಹೇಳುವುದಕ್ಕೆ ನನಗೇನೂ ಬೇಸರ ಇಲ್ಲ.

ಅಧ್ಯಕ್ಷರು : ಅದು ಈ ಮಸೂದೆಯ ಮೂಲ ಉದ್ದೇಶಗಳಲ್ಲಿ ಒಂದಾಗಿರಲಿಲ್ಲ ಅಲ್ಲವೆ?

ಶ್ರೀ ಸಿ. ಬೈರೇಗೌಡ : ಇದು ಇಂದು ವಾಸ್ತವಿಕವಾಗಿ ಆಗಿರುವುದು ನನ್ನ ಕೈಯಲ್ಲಿಯೇ ಆಗಲಿಲ್ಲ. ನಾನು ತಾಲ್ಲೂಕ್ ಸಮಿತಿ ಅಧ್ಯಕ್ಷನಾಗಿದ್ದೇನೆ.

ಶ್ರೀ ಹೆಚ್ ಏಕಾಂತಯ್ಯ : ಈಗ ಭ್ರಷ್ಟಾಚಾರದ ಕೇಂದ್ರೀಕರಣ ಮಾಡಬೇಕು ಎಂದು ತಾವು ಹೇಳುತ್ತಿದ್ದೀರಾ?

ಶ್ರೀ ಸಿ. ಬೈರೇಗೌಡ : ಆದರೆ ಈ ಮಸೂದೆಯಲ್ಲಿ ಅದನ್ನು ಸರಿಪಡಿಸತಕ್ಕಂಥದ್ದಕ್ಕೆ ತಾವು ಇದರಲ್ಲಿ ಏನೂ ತಿದ್ದುಪಡಿ ತಂದಿಲ್ಲ. ನೀವು ಏನು ಹೇಳುತ್ತೀರಿ? ಮಾತೆತ್ತಿದರೆ ಸರ್ಕಾರಕ್ಕೆ ಅಧಿಕಾರ ಬೇಡವೇ ಎಂದು. ಆದರೆ ಚುನಾಯಿತ ಪ್ರತಿನಿಧಿಗಳು ಇರತಕ್ಕ ಜಿಲ್ಲಾ ಪರಿಷತ್ತಿನ ತಿದ್ದುಪಡಿಯ ಕೆಲವು ಕಲಮುಗಳನ್ನು ನಾನು ನೋಡಿದ್ದೇನೆ. ಎಲ್ಲೆಲ್ಲಿ ಜಿಲ್ಲಾ ಪರಿಷತ್ ಎಂದು ಇದೆಯೇ, ಆ ಜಿಲ್ಲಾ ಪರಿಷತ್ ಎನ್ನುವ ಕಡೆ ತಾವು ಏನು ಮಾಡಿದ್ದೀರಿ? ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಎಂದು ತಾವು ಬದಲಾವಣೆ ಮಾಡಿದ್ದೀರಿ. ಚುನಾಯಿತ ಪ್ರತಿನಿಧಿಗಳಿಗೆ ಜಿಲ್ಲಾ ಪರಿಷತ್‌ನಲ್ಲಿ ಇದ್ದ ಅಧಿಕಾರವನ್ನು ತೆಗೆದು ನೀವು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಎಂದು ತಾವು ತಿದ್ದುಪಡಿಯಲ್ಲಿ ಸೇರಿಸಿದ್ದೀರಿ..

ಶ್ರೀ ಹೆಚ್. ಏಕಾಂತಯ್ಯ : ಭ್ರಷ್ಟಾಚಾರದ ಹಸ್ತಾಂತರಣ..

ಶ್ರೀ ಸಿ. ಬೈರೇಗೌಡ : ನೀವು ಇರತಕ್ಕಂಥ ವಾಸ್ತವಾಂಶಗಳನ್ನು ಗಮನಿಸಿ ಅದನ್ನು ಸರಿಪಡಿಸತಕ್ಕಂಥಹದ್ದು ಈ ತಿದ್ದುಪಡಿಯಲ್ಲಿ ಇರಬೇಕಾಗಿತ್ತು. ಇಂತಿಂತಹ ಮಂಡಲ ಪಂಚಾಯತಿಗಳು ಈ ರೀತಿ ತಪ್ಪುಗಳನ್ನು ಮಾಡಿದ್ದಾರೆ. ಅರ್ಜಿ ಕೊಟ್ಟ ತಕ್ಷಣ ಮನೆ ಕಟ್ಟುವುದಕ್ಕೆ ಲೈಸನ್ಸ್ ಕೊಡದಿದ್ದರೆ ಅಥವಾ ದೀಪ ಹಾಕಿಕೊಳ್ಳುವುದಕ್ಕೆ ಪರವಾನಗಿ ಕೇಳಿಬಂದಿರತಕ್ಕ ಅರ್ಜಿಗಳನ್ನು ಇಷ್ಟು ದಿವಸದೊಳಗೆ ಅವನ್ನು ವಿಲೇವಾರಿ ಮಾಡದೆ ಇದ್ದರೆ ನೀವು ಅವರ ಮೇಲೆ ಈ ರೀತಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕದ್ದು ಈ ತಿದ್ದುಪಡಿಯಲ್ಲಿ ಎಲ್ಲಿ ಇದೆ? ಎಲ್ಲೂ ಇಲ್ಲ. ಒಂದು ಮಾತ್ರ

ಇದೆ. ಮಂಡಲ್ ಪಂಚಾಯತ್‌ಗೆ ಮನೆ ಕಟ್ಟುವುದಕ್ಕೆ ಲೈಸೆನ್ಸ್ ಕೇಳಿ ಅರ್ಜಿ ಕೊಟ್ಟ 30ಅಥವಾ 40ದಿವಸಗಳೊಳಗಾಗಿ ಲೈಸೇನ್ಸ್ ಕೊಡದೇ ಇದ್ದರೆ ಮನೆ ಕಟ್ಟಿಕೊಳ್ಳಬಹುದು ಎಂದು ಇದೆ. ಇಷ್ಟನ್ನು ಬಿಟ್ಟರೆ ಅವರ ಮೇಲೆ ಏನೂ ಕೂಡ ಕ್ರಮ ಇಲ್ಲ. ಲೈಸೆನ್ಸ್ ಕೊಡದೇ ಇರುವುದಕ್ಕೆ ಕಾರಣ ಏನು? ಈ ಮೂಲಭೂತ ಸಮಸ್ಯೆಗೆ ನೀವು ತಿದ್ದುಪಡಿ ಮಸೂದೆಯಲ್ಲಿ ರೆಮಿಡಿಯನ್ನು ಕೊಟ್ಟಿಲ್ಲ. ನೀವು ಇದಕ್ಕೆ ಪರಿಹಾರವನ್ನು ಸೂಚಿಸಿಲ್ಲ.

ಇನ್ನೊಂದು ವಿಚಾರವನ್ನು ವೈಯಕ್ತಿಕವಾಗಿ ನಾನು ಹೇಳಬೇಕಾಗಿದ್ದರೆ, ಇವ್ಹೊತ್ತು ಅಧಿಕಾರ ಯಾರು ನಡೆಸುತ್ತಾರೆ, ಅಲ್ಲಿರತಕ್ಕಂಥ ಮಂಡಲ ಪಂಚಾಯತ್‌ನವರು ನಡೆಸುತ್ತಾರೋ, ಜಿಲ್ಲಾಪರಿಷತ್‌ನವರು ನಡೆಸುತ್ತಾರೋ, ಅಥವಾ ಸರಕಾರದವರು ನಡೆಸುತ್ತಾರೋ ಅಥವಾ ಈ ಸಭೆಯ ಸದಸ್ಯರಾಗಿರತಕ್ಕಂಥವರು ನಡೆಸುತ್ತಾರೋ ಎನ್ನುವುದಕ್ಕಿಂದ ಹೆಚ್ಚಿಗೆ ಈ ಒಂದು ಅಧಿಕಾರದಿಂದ ಜನರು ಎಷ್ಟರ ಮಟ್ಟಿಗೆ ಉಪಯೋಗವನ್ನು ಹೊಂದಿದ್ದಾರೆ ಮತ್ತು ಪ್ರಯೋಜನವನ್ನು ಪಡೆಯುತ್ತಾ ಇದ್ದಾರೆ ಎನ್ನುವಂಥಾದ್ದು ಮುಖ್ಯ. ಆದರೆ ಇವ್ಹೊತ್ತು ಈ ಬಗ್ಗೆ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಹೇಳತಕ್ಕಂಥ ಈಗಿನ ಕಾನೂನಿನಲ್ಲಿಯೂ ಕೂಡ ಪರಿಹಾರ ಇಲ್ಲ. ಈಗ ತಾವು ತಂದಿರತಕ್ಕಂಥ ತಿದ್ದುಪಡಿಯಲ್ಲಿಯೂ ಕೂಡ ಇದಕ್ಕೆ ಪರಿಹಾರ ಇಲ್ಲ. ಇದನ್ನು ಬಹಳ ಖೇದದಿಂದ ನಾನು ಹೇಳ ಬೇಕಾಗುತ್ತದೆ. ಇನ್ನು ನಮ್ಮಲ್ಲಿಯ ಚುನಾವಣೆಗಳ ಬಗ್ಗೆ ಏನು ಹೇಳುವುದು ಸ್ವಾಮಿ? ಇವ್ಹೊತ್ತು 10-12 ವರ್ಷದ ಮಕ್ಕಳೂ ಕೂಡ ಪ್ಲಾಸ್ಟಿಕ್ ಚೀಲಗಳಲ್ಲಿನ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದಾರೆಂಬ ಬಗ್ಗೆ ಇಲ್ಲಿ ಚರ್ಚೆ ಆಯಿತು. ಆಗ ತಾವು ಪೀಠದಲ್ಲಿರಲಿಲ್ಲ. ಮೊನ್ನೆ ನನ್ನ ಕ್ಷೇತ್ರದಲ್ಲಿ ಯಾವ ರೀತಿಯ ಚುನಾವಣೆ ಆಯಿತು ಅದೇ ರೀತಿಯಲ್ಲಿ ರಾಜ್ಯದ ಇತರೆಡೆಗಳಲ್ಲಿ ಕೂಡ ನಡೆದಿರಬಹುದು ಎಂದು ಭಾವಿಸಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್ : ಯಾವ ಚುನಾವಣೆಗಳು ಸ್ವಾಮಿ? ಮಂಡಲ ಪಂಚಾಯಿತಿ ಚುನಾವಣೆಗಳೇ ಅಥವಾ ತಮ್ಮ ಚುನಾವಣೆಯೋ?

ಶ್ರೀ ಸಿ. ಬೈರೇಗೌಡ : ಬೇರೆ ಚುನಾವಣೆಗೂ ಇದಕ್ಕೂ ತುಂಬಾ ವ್ಯತ್ಯಾಸ ಇದೆ. ಈ ಚುನಾವಣೆಯಲ್ಲಿ 10-12 ವರ್ಷದ ಹುಡುಗರ ಕೈಗೂ ಪ್ಲಾಸ್ಟಿಕ್ ಚೀಲದಲ್ಲಿನ ಸಾರಾಯಿ ಬಂತು. ಕೆಲವು ಕಡೆ ಅದಕ್ಕೆ ಯೂರಿಯಾ ಮೂಟೆ ಎಂದು ಮತ್ತೆ ಕೆಲವು ಕಡೆ ಬೂಸಾ ಮೂಟೆ ಎಂದು ಕೂಡ ಕರೆಯುತ್ತಾರೆ. ಇದು ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಪ್ರಾರಂಭವಾದದು. ಈಗ ಯಾವ ಹಳ್ಳಿಯ ಯಾವ ರಸ್ತೆಗಳಲ್ಲಿ ನೋಡಿದರೂ ಕೂಡ ಕಾಲಿ ಚೀಲಗಳು ಎಲ್ಲೆಂದರಲ್ಲಿ ಬಿದ್ದಿರುವುದನ್ನು ಕಾಣಬಹುದು. ಇಂಥ ದೃಶ್ಯವನ್ನು ನಾವು ಹಿಂದೆಂದೂ ಕಂಡಿರಲಿಲ್ಲ ; ಹಾಗಿದ್ದರೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಬೇಡವೇ ಎಂದು ತಾವುಗಳು ನನ್ನನ್ನು ಕೇಳಬಹುದು? ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳೂ ಬೇಕೇ ಬೇಕು. ಆದರೆ ವಿಧಾನ ಸಭೆ, ಲೋಕಸಭೆಗಳಿಗೆ ನಡೆಯತಕ್ಕಂಥ ಚುನಾವಣೆಗಳಿಗೂ, ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳಿಗೆ ನಡೆಯತಕ್ಕಂಥ ಚುನಾವಣೆಗಳಿಗೂ ಅಜಗಜಾಂತರದಷ್ಟು ವ್ಯತ್ಯಾಸ ಇದೆ. ಇವ್ಹೊತ್ತು ಅದಕ್ಕೆ ಕಾರಣ ಏನೆಂದರೆ, ಮಂಡಲ ಮಟ್ಟದಲ್ಲಿ ಚುನಾವಣೆಯು ಅಲ್ಲಿಯ ಡಿವಿಜನ್ ಮಟ್ಟದಲ್ಲಿ ನಡೆಯುತ್ತದೆ. ಅಲ್ಲಿ ನೂರಾರು ರೂಪಾಯಿಗಳ ಹಣವನ್ನು ಖರ್ಚು ಮಾಡಿದರೆ ಯಾರೂ ವ್ಯಥೆ ಪಡುವುದಿಲ್ಲ. ಆದರೆ ಕೆಲವು ಕಡೆಗಳಲ್ಲಿ ಸಾವಿರಾರು ಇಲ್ಲವೆ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಇದಕ್ಕಾಗಿ ಖರ್ಚು ಮಾಡಿದ್ದಾರೆ. ಈ ಬಗ್ಗೆ ನಾನು ನನ್ನ ಕ್ಷೇತ್ರದಲ್ಲಿ ನಡೆದು ಹೋದ ವಿಚಾರವನ್ನು ಹೇಳಿದರೆ ಅದು ಸೂಕ್ತವಾಗಬಹುದು ಎಂದು ಭಾವಿಸಿದ್ದೇನೆ.

ಈಗ ಚುನಾವಣೆ ಯಾವ ರೀತಿಯಾಗಿ ನಡೆಯಬೇಕೆಂಬ ಬಗ್ಗೆ ತಾವುಗಳು ತಿದ್ದುಪಡಿಯನ್ನು ತಂದಿಲ್ಲ. ಆ ಬಗ್ಗೆ ಯೋಚನೆಯನ್ನು ಕೂಡ ತಾವು ಮಾಡಿಲ್ಲ. ಆ ದಿಕ್ಕಿನಲ್ಲಿ ಈಗಂತೂ ತಿದ್ದುಪಡಿಯನ್ನು ತಂದಿಲ್ಲ. ಈ ಶಾಸನದಲ್ಲಿ ಇಂತಹ ಲೋಪದೋಷಗಳನ್ನು ತರಿಪಡಿಸತಕ್ಕಂಥದ್ದರ ಬಗ್ಗೆ ತಿದ್ದುಪಡಿ ಆಗಬೇಕಾಗಿತ್ತು. ಆದರೆ ಹಾಗೆ ಆಗಿಲ್ಲ ; ಚುನಾವಣೆಯ ಹಿಂದಿನ ದಿವಸ ನಮ್ಮ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಒಂದು ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಚುನಾವಣೆಗಳು ಪಕ್ಷದ ಆಧಾರದ ಮೇಲೆ ನಡೆದಿದ್ದುದರಿಂದ ನಾವು ಯಾರೂ ಗೆಲ್ಲುವುದಿಲ್ಲ ಎಂಬ ಒಂದು ತೀರ್ಮಾನಕ್ಕೆ ನಾನು ಬಂದಿದ್ದೆ. ಚುನಾವಣೆಯ ಹಿಂದಿನ ದಿವಸ ಮೊದಲ ಸರದಿ ಕಾಂಗ್ರೆಸ್‌ನವರದ್ದು. ಮತದಾರರೆಲ್ಲರಿಗೂ ಒಂದೊಂದು ಸ್ಟೈನ್‌ಲೆಸ್ ಸ್ಟೀಲ್ ತಟ್ಟೆ, ಅದರಲ್ಲಿ ಒಂದು ಕುಪ್ಪಸ ಮತ್ತು ಕೆಲವರಿಗೆ ಜೊತೆಗೆ ವಿಸ್ಕಿಬಾಟಲ್, ಕೆಲವರಿಗೆ ಬ್ರಾಂದಿ, ಕೆಲವರಿಗೆ ಪ್ಲಾಸ್ಟಿಕ್ ಚೀಲದಲ್ಲಿರುವ ಸಾರಾಯಿ ಹೀಗೆ ಅವರವರ ದರ್ಜೆಗೆ ಅನುಸಾರವಾಗಿ ಪ್ರತಿ ಮನೆಗೂ ಸರಬರಾಜು ಆಯಿತು. ಅಲ್ಲಿಯವರೆಗೆ ನಮ್ಮ ಪಕ್ಷದವರೂ ಕೂಡ ಸುಮ್ಮನೆ ಇದ್ದರು. ಆಮೇಲೆ ನಾವೇನು ಇವರಿಗಿಂತ ಕಡಿಮೆ ಎಂದು ಪ್ರಾರಂಭ ಮಾಡಿದರು. ಇದು ಎಲ್ಲಾ ಪಕ್ಷಗಳಲ್ಲಿಯೂ ಇಂದು ನಡೆಯತಕ್ಕಂಥ ವಿಚಾರವಾಗಿದೆ. ಇದೇನು ಹೊಸದಲ್ಲ ನಮ್ಮ ಪಕ್ಷದವರೂ ಮೊದಲು ಸುಮ್ಮನೆ ಇದ್ದವರು ನಂತರ ಹತ್ತಿರದಲ್ಲಿನ ಪಟ್ಟಣಕ್ಕೆ ಹೋಗಿ ಇವರು ಕೊಟ್ಟ ಎರಡರಷ್ಟು ಮೊತ್ತದ ವಸ್ತುಗಳನ್ನು ಖರೀದಿ ಮಾಡಿ ಹಂಚಿಕೆ ಮಾಡಿದ್ದಾಯಿತು. ಅಂದರೆ ಸುಮಾರು 150ರೂಗಳಷ್ಟು ಮೊತ್ತದ ಸಾಮಾನುಗಳನ್ನು ಅಂದರೆ ಸ್ಟೀಲ್ ಸಾಮಾನುಗಳು, ಸೀರೆ ಹೀಗೆ ನಮ್ಮವರು ಡಿಸ್ಟ್ರಿಬ್ಯೂಟ್ ಮಾಡಿದರು. ಚುನಾವಣೆ ನಡೆಯಿತು; ಫಲಿತಾಂಶ ಬಂದಾಗ ನಮಗೆ ಆಶ್ಚರ್ಯ, ನಮ್ಮವರೇ 3 ಜನರು ಗೆಲ್ಲುತ್ತಾರೆ. ಒಟ್ಟಿನಲ್ಲಿ ಚುನಾವಣೆ ನಡೆದು ಫಲಿತಾಂಶ ಬಂದು ನಮ್ಮವರು ಗೆದ್ದರು ಎಂಬುದು ಮುಖ್ಯವಲ್ಲದಿದ್ದರೂ ಪ್ರಜಾಪ್ರಭುತ್ವದ ಮೂಲ ಬೇರು ಎಂದೆಲ್ಲಾ ನಾವೇನು ಕರೆಯುತ್ತೇವೆ, ಅದರ ಮೂಲದ ಹೆಸರಲ್ಲಿ ನಡೆಯತಕ್ಕಂಥ ಇಂತಹ ವಿಚಾರವನ್ನು ವಿಷಾದದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು : ಈ ಚುನಾವಣೆಯಲ್ಲಿ ಎಲೆಕ್ಷನ್ ಎಕ್ಸ್‌ಪೆಂಡೀಚರ್ ರಿಟರ್ನ್ಸ್ ಏನಾದರೂ ಕೊಡಬೇಕಾಗಿತ್ತೋ ಹೇಗೆ?

ಶ್ರೀ ಸಿ. ಬೈರೇಗೌಡ : ಏನಿಲ್ಲ, ಅದಕ್ಕಾಗಿ ನಾನು ನಡೆದ ವಿಚಾರವನ್ನು ಹೇಳಿದೆ ಅಷ್ಟೆ.

ಅಧ್ಯಕ್ಷರು : ಒಳ್ಳೆಯದು ಮಾಡಿದಿರಿ : ತಮಗೆ ಇನ್ನೂ ಸಮಯ ಬೇಕೆಂದು ಕಾಣುತ್ತದೆ. ಆದ್ದರಿಂದ ಸಭೆಯು ದಿನದ ಕಲಾಪವನ್ನು ಇಲ್ಲಿಗೆ ಮುಗಿಸಿ ಮತ್ತೆ ನಾಳೆ ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 6 ಘಂಟೆ ಎರಡು ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 27ನೇ ಡಿಸೆಂಬರ್ ಮಾಹೆ 1990ರ ಗುರುವಾರದಂದು ಬೆಳಿಗ್ಗೆ 9.30 ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)